ಉಪನ್ಯಾಸ ಗ್ರಂಥಮಾಲೆ

೪೨೩

ಶಿವಶರಣೆಯರ ಸಂದೇಶ

ಡಾ॥ ಶಶಿಕಲಾ ಮರಿಬಾಶೆಟ್ಟಿ
ಎಂ. ಎ., ಪಿಎಚ್. ಡಿ.

ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ

ಜುಲೈ, ೧೯೯೨

ಉಪನ್ಯಾಸ ಗ್ರಂಥಮಾಲೆ

೪೨೩

ಶಿವಶರಣೆಯರ ಸಂದೇಶ

ಡಾ॥ ಶಶಿಕಲಾ ಮಠಬಾಶೆಟ್ಟಿ

ಎಂ. ಎ., ಪಿಎಚ್. ಡಿ.

ಪ್ರಸಾರಾಂಗ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಜುಲೈ. ೧೯೯೭

ಪ್ರಕಾಶಕರು :

ಸದಾನಂದ ಕನವಳ್ಳಿ

ನಿರ್ದೇಶಕರು, 'ಪ್ರಸಾರಾಂಗ'
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಪ್ರಥಮ ಮುದ್ರಣ : ಜುಲೈ, ೧೯೭೨
೫,೦೦೦ ಪ್ರತಿಗಳು

ಬೆಲೆ : ರೂ. ೧-೦೦

ಮುದ್ರಕರು :

ಸಂಗಮೇಶ್ವರ ಪ್ರಿಂಟರ್ಸ್
ಎಂ. ನಗರ, ತೋಟಗೇರ ಓಣಿ
ಧಾರವಾಡ

ಮುನ್ನುಡಿ

ಕರ್ನಾಟಕ ವಿಶ್ವವಿದ್ಯಾಲಯವು ತನ್ನ ಪ್ರಸಾರಾಂಗದ ಮುಖಾಂತರ ಕೈಕೊಂಡು ನಡೆಸುತ್ತಿರುವ ಜ್ಞಾನಪ್ರಸಾರದ ಯೋಜನೆಗಳಲ್ಲಿ ಈ 'ಉಪನ್ಯಾಸ ಗ್ರಂಥಮಾಲೆ' ಅತ್ಯಂತ ಮುಖ್ಯವೂ, ಜನಪ್ರಿಯವೂ ಆಗಿರುವುದು ಹೆಮ್ಮೆಯ ಮಾತಾಗಿದೆ. ವಿಶ್ವವಿದ್ಯಾಲಯದ ಆಡಳಿತ ಕ್ಷೇತ್ರದಲ್ಲಿರುವ ನಾಲ್ಕು ಜಿಲ್ಲೆಗಳಲ್ಲಿಯೂ ಉಪನ್ಯಾಸ ಶಿಬಿರಗಳನ್ನು ಏರ್ಪಡಿಸಲಾಗುತ್ತಿದ್ದು, ವಿಶ್ವವಿದ್ಯಾಲಯದ ಮತ್ತು ಇದಕ್ಕೆ ಸೇರಿದ ಕಾಲೇಜುಗಳ ಪ್ರಾಧ್ಯಾಪಕರು ಸಾಹಿತ್ಯ, ವಿಜ್ಞಾನ, ಸಾಮಾಜಿಕ ಶಾಸ್ತ್ರ ಮೊದಲಾದ ಶಾಖೆಗಳಿಗೆ ಸಂಬಂಧಪಟ್ಟ ವಿಷಯಗಳನ್ನು ಆಯ್ದುಕೊಂಡು ಶಾಸ್ತ್ರಸಮ್ಮತವಾದ ಸರಣಿಯಲ್ಲಿ, ಜನಸಾಮಾನ್ಯರಿಗೆ ತಿಳಿಯುವ ಶೈಲಿಯಲ್ಲಿ ಈ ಶಿಬಿರಗಳಲ್ಲಿ ಉಪನ್ಯಾಸಗಳನ್ನು ಕೊಡುತ್ತಾರೆ. ವಿಶ್ವವಿದ್ಯಾಲಯದ ಜ್ಞಾನ ಭಂಡಾರದ ಅಲ್ಪಾಂಶವನ್ನಾದರೂ ಮಹಾಜನರ ಮನೆ ಬಾಗಿಲಿಗೆ ಒಯ್ದು ಮುಟ್ಟಿಸಬೇಕೆಂದು ಮಾಡಿದ ಈ ಪ್ರಯತ್ನಕ್ಕೆ ನಮ್ಮ ನಿರೀಕ್ಷೆಗೆ ಮೀರಿದ ಮೆಚ್ಚಿಗೆಯು ಪ್ರೋತ್ಸಾಹವೂ ದೊರೆಯುತ್ತಿವೆ. ಜನರು ತಾವಾಗಿಯೇ ಮುಂದೆ ಬಂದು ತಮ್ಮ ತಮ್ಮ ಊರುಗಳಲ್ಲಿ ಈ ಉಪನ್ಯಾಸಗಳನ್ನು ಏರ್ಪಡಿಸಲು ವಿಶ್ವವಿದ್ಯಾಲಯಕ್ಕೆ ಬರೆದು ಬಿನ್ನವಿಸಿಕೊಳ್ಳುತ್ತಿರುವುದು ನಿಜವಾಗಿಯೂ ಸಂತೋಷದ ಸಂಗತಿಯಾಗಿದೆ.

ಈ ಜ್ಞಾನಪ್ರಸಾರ ಕಾರ್ಯದಲ್ಲಿ ಭಾಗವಹಿಸುವುದರಿಂದ ವಿಶ್ವವಿದ್ಯಾಲಯದ ಹಾಗೂ ಕಾಲೇಜುಗಳ ಅಧ್ಯಾಪಕರಿಗೆ ಆಯಾ ಪ್ರದೇಶದ ಜನತೆಯೊಡನೆ ಹೆಚ್ಚಿನ ಸಂಪರ್ಕ ಒದಗುವುದಲ್ಲದೆ ಎಂತಹ ವಿಷಯವನ್ನಾದರೂ ಕನ್ನಡದಲ್ಲಿ ತಿಳಿಸಿ ಹೇಳುವ ಹಾಗೂ ಅದನ್ನು ಸುಲಭ ಶೈಲಿಯಲ್ಲಿ ಬರವಣಿಗೆಯಲ್ಲಿಳಿಸುವ ಅವಕಾಶ ದೊರೆಯುತ್ತದೆ. ಈ ಕಾರ್ಯದಲ್ಲಿ ಅವರೆಲ್ಲರೂ ಮನಮುಟ್ಟಿ ಸಹಕರಿಸುತ್ತಿರುವುದು ಶ್ಲಾಘನೀಯ.

ಈ ಮಾಲೆಯಲ್ಲಿ ಈಗಾಗಲೇ ೪೨೨ ಪುಸ್ತಿಕೆಗಳು ಪ್ರಕಟವಾಗಿವೆ. ಅವು ಅಚ್ಚಾಗಿ ಹೊರಬಂದೊಡನೆ ಅವುಗಳ ಸಾವಿರಾರು ಪ್ರತಿಗಳನ್ನು ಜನರು ಕೊಂಡು ಓದುತ್ತಾರೆ. ಅನೇಕ ಪುಸ್ತಿಕೆಗಳು ನಾಲ್ಕು ಐದು ಮುದ್ರಣಗಳನ್ನು ಕಂಡಿರುವುದು ಈ ಮಾಲೆಯ ಉಪಯುಕ್ತತೆಯನ್ನೂ ಜನಪ್ರಿಯತೆಯನ್ನೂ ವ್ಯಕ್ತಗೊಳಿಸುತ್ತದೆ. ಇದು ನಾಡಿನ ಪ್ರಗತಿಯ ಚಿಹ್ನೆಯೆಂದು ಭಾವಿಸುತ್ತೇನೆ.

ವಿಶ್ವವಿದ್ಯಾಲಯದ ಈ ಸೇವೆಯ ಸಂಪೂರ್ಣ ಪ್ರಯೋಜನ ಪಡೆದು ಸಾಮಾನ್ಯ ಜನತೆ ನಾಡಿನ ಸರ್ವತೋಮುಖ ಪ್ರಗತಿಯಲ್ಲಿ ಪಾಲುಗೊಳ್ಳಲೆಂದು ಹಾರೈಸುತ್ತೇನೆ.

ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ

ಡಾ॥ ಎಸ್. ರಾಮೇಗೌಡ
ಕುಲಪತಿಗಳು

———

ಅರಿಕೆ

ಕರ್ನಾಟಕ ವಿಶ್ವವಿದ್ಯಾಲಯದ ಪ್ರಸಾರಾಂಗ ವಿಭಾಗವು 'ವ್ಯಾಸಂಗ ವಿಸ್ತರಣ ಉಪನ್ಯಾಸ' ದ ಅಂಗವಾಗಿ ಧಾರವಾಡ ಜಿಲ್ಲೆಯ ಸುಣಕಲ್ ಬಿದರಿಯಲ್ಲಿ ಏರ್ಪಡಿಸಿದ ಭಾಷಣಮಾಲೆಯಲ್ಲಿ ನನಗೆ 'ಶಿವಶರಣೆಯರ ಸಂದೇಶ' ಎಂಬ ವಿಷಯವನ್ನು ಕುರಿತು ಮಾತನಾಡುವ ಸದವಕಾಶವು ದೊರೆಯಿತು. ಅದರ ವಿಸ್ತೃತ ರೂಪವೇ ಈ ಕಿರುಹೊತ್ತಿಗೆ.

ಶಿವಶರಣೆಯರ ಸಾಹಿತ್ಯವು ವಿಶಾಲವಾಗಿರುವದು. ಅವರ ಸಂದೇಶ ಮಾನವ ಕಲ್ಯಾಣದ ಧೋರಣೆಯನ್ನು ಹೊಂದಿರುವದು. ಕರಿಯು ಕನ್ನಡಿಯೊಳಗಿರಿಸಿದಂತೆ ಅವರ ಅನುಭವಾಮೃತವನ್ನು ಈ ಪುಟ್ಟ ಪುಸ್ತಕದಲ್ಲಿ ತಿಳಿಸುವ ಪ್ರಯತ್ನ ಮಾಡಲಾಗಿದೆ.

ಹಲವು ಸಾಮಾಜಿಕ ಜಾಡ್ಯಗಳಿಂದ ಬಳಲುತ್ತಿರುವ ಇಂದಿನ ಸ್ತ್ರೀ ಸಮಾಜಕ್ಕೆ ಶರಣೆಯರ ಸಂದೇಶ ಮರುಜೀವಣಿಯೆನಿಸ-ಬಲ್ಲುದು. ಇಹ-ಪರಗಳ ಸುಖಕ್ಕೆ ಸಾಧನವಾಗಬಲ್ಲುದು. ಅವರ ಸಂದೇಶವನ್ನು ಇಲ್ಲಿ ವಿಸ್ತಾರವಾಗಿ ವಿವೇಚಿಸಿಲ್ಲವಾದರೂ ಪ್ರಮುಖವಾದುದನ್ನು ಬಿಟ್ಟಿಲ್ಲವೆಂಬ ಭಾವನೆ ನನ್ನದು.

ನನಗೆ ಭಾಷಣ ಮಾಡಲು ಮತ್ತು ಈ ಪುಸ್ತಿಕೆಯನ್ನು ಬರೆಯಲು ಅನುವು ಮಾಡಿಕೊಟ್ಟ ಆಗಿನ ನಿರ್ದೇಶಕರಾದ ಶ್ರೀ ಎಸ್.ಬಿ. ನಾಯಕ ಅವರಿಗೆ ನನ್ನ ಕೃತಜ್ಞತೆಗಳು. ಹಾಗೆಯೇ

ಕರ್ನಾಟಕ ವಿಶ್ವವಿದ್ಯಾಲಯದ ವ್ಯಾಸಂಗವಿಸ್ತರಣ ಉಪನ್ಯಾಸ ಮಾಲೆಯ ಹಾಗೂ ಗ್ರಂಥ ಪ್ರಕಾಶನದ ಅಧಿಕಾರಿಗಳಿಗೂ ನನ್ನ ನಮನಗಳು. ಈ ಕೃತಿ ರಚನೆಯ ಸಂದರ್ಭದಲ್ಲಿ ಸೂಕ್ತ ಸಲಹೆಗಳನ್ನಿತ್ತ ಡಾ॥ ಬಿ. ಕೆ. ಹಿರೇಮಠ ಅವರಿಗೆ ನನ್ನ ಕೃತಜ್ಞತೆಗಳು.

ಶ್ರೀ ಸಿದ್ಧೇಶ್ವರ ಸರಕಾರಿ
ಪ್ರಥಮ ದರ್ಜೆ ಕಾಲೇಜ
ನರಗುಂದ

ಡಾ॥ ಶಶಿಕಲಾ ಮಾರಿಬಾಶೆಟ್ಟಿ

——

ಪರಿವಿಡಿ

೧. ಶಿವಶರಣೆಯರು

ಪ್ರಾಚೀನ ಕಾಲದಿಂದಲೂ ಭಾರತದಲ್ಲಿ ಸ್ತ್ರೀಯರನ್ನು ಗೌರವಾದರಗಳಿಂದ ಕಾಣುತ್ತ ಬಂದಿದ್ದರೂ, ಅವರ ಚೆಲುವು-ಒಲವುಗಳನ್ನು ಬಾಯ್ತುಂಬ ಹಾಡಿ ಹೊಗಳಿದ್ದರೂ ಸ್ವತಃ ಸ್ತ್ರೀಯರು ತಮ್ಮನ್ನೇ ತಾವು ಅಭಿವ್ಯಕ್ತಿಸಿಕೊಂಡ ಸಂದರ್ಭಗಳು ಅತಿವಿರಳ. ಜಾನಪದ ಸಾಹಿತ್ಯವನ್ನು ಹೊರತುಪಡಿಸಿದರೆ ಇಡೀ ಭಾರತೀಯ ಸಾಹಿತ್ಯನಂದನದಲ್ಲಿ ಭಾರತೀಯ ಸ್ತ್ರೀ ಉಲಿದುದು ಅಪರೂಪವೆ. ಭಾರತದ ಎಲ್ಲ ಭಾಷಾಸಾಹಿತ್ಯ-ಗಳಿಗೂ ಈ ಮಾತು ಅನ್ವಯ; ಅಂತೆಯೆ ಕನ್ನಡಕ್ಕೂ. ಸುದೀರ್ಘ ಚರಿತ್ರೆಯ ಕನ್ನಡ ಸಾಹಿತ್ಯದಲ್ಲಿ ಹೆಣ್ಣಿನ ಧ್ವನಿ ಕೇಳಿ ಬಂದುದು

೧. ಜಾನಪದ ಸಾಹಿತ್ಯ

೨. ವಚನ ಸಾಹಿತ್ಯ

೩. ಚಿಕ್ಕದೇವರಾಯನ ಕಾಲದ ಸಾಹಿತ್ಯ

ಈ ಮೂರು ಸಂದರ್ಭಗಳಲ್ಲಿ ಮಾತ್ರ. ಜಾನಪದ ಸಾಹಿತ್ಯ-ದಲ್ಲಿ ಗರತಿಯರು ತಮ್ಮಷ್ಟಕ್ಕೆ ತಾವೇ ಹಾಡಿಕೊಂಡವರು. ಅದು ಗುಪ್ತಗಾಮಿನಿಯಾಗಿಯೇ ಈವರೆಗೂ ಹರಿದು ಬಂದಿದೆ. ಇನ್ನು ಚಿಕ್ಕದೇವರಾಯ ಅರಸರ ಕಾಲದ ಹೊನ್ನಮ್ಮ, ಶೃಂಗಾರಮ್ಮ,

ಜೆಲುವಾಂಬೆ ಹಾಗೂ ವೈಷ್ಣವ ಭಕ್ತಿಪಂಥದ ಹೆಳವನಕಟ್ಟೆ ಗಿರಿಯಮ್ಮ ಮೊದಲಾದವರ ಸಾಹಿತ್ಯದಲ್ಲಿ ಸಾಂಪ್ರದಾಯಿಕ ಧೋರಣೆ ಮುಂದುವರೆದಿದೆ. ಈ ಎರಡೂ ಪರಂಪರೆಗಳಿಗೆ ಹೊರತಾಗಿ ಆತ್ಮಾನ್ವೇಷಣೆಯ ಮೂಲಕ ಸಮಾಜದ ಸರ್ವ-ತೋಮುಖವಾದ ಕಲ್ಯಾಣವನ್ನು ನೆಲೆಗೊಳಿಸುವ ಕಾರ್ಯ ಶಿವಶರಣ-ಶರಣೆಯರ ಜೀವನ ಹಾಗೂ ಸಾಹಿತ್ಯಗಳಿಂದ ನಡೆಯಿತು.

ವಚನಕಾರ್ತಿಯರಲ್ಲಿ ಸಂಪ್ರದಾಯದ ಜೊತೆಜೊತೆಗೆ ಕೆಲ-ವರು ವ್ಯವಸ್ಥೆಯ ವಿರುದ್ಧ ಪ್ರತಿಭಟನಾ ಮನೋಭಾವ ಬೆಳೆಯಿಸಿಕೊಂಡಿರುವದು ಕಂಡುಬರುತ್ತದೆ. ಒಂದು ಕಾಲಕ್ಕೆ ಧಾರ್ಮಿಕ ಜೀವನ ಹೆಣ್ಣಿಗೆ ನಿಷಿದ್ಧವಾಗಿತ್ತು. ಆ ನಿಷೇಧಿತ ಕ್ಷೇತ್ರವನ್ನೇ ಪ್ರವೇಶಿಸಿ ವಚನಕಾರ್ತಿಯರು ಸಾಮಾಜಿಕ ಅವ್ಯ-ವಸ್ಥೆಯ ಬಗೆಗೆ ಆಕ್ರೋಶದಿಂದ ಬರೆದಿರುವದನ್ನು ಹಲವಾರು ಶಿವಶರಣೆಯರ ವಚನಗಳಲ್ಲಿ ಗುರುತಿಸಬಹುದು.

ಶರಣ್ಯಭಾವದಿಂದ ಶಿವನನ್ನು ಆರಾಧಿಸಿ ಕೊನೆಯಲ್ಲಿ ಶಿವನೇ ಆಗುವ ಭಕ್ತರನ್ನು "ಶಿವಶರಣರು" ಎಂದು ಹೇಳಲಾಗುತ್ತದೆ. 'ಶಿವಶರಣೆ' ಎಂಬುದು ಸ್ತ್ರೀವಾಚಿ. ಶಿವಶರಣ-ಶರಣೆಯರೆಲ್ಲರೂ ಬದುಕಿದ್ದು ನಿರ್ಮಲವಾದ ಬದುಕನ್ನು. ಆ ಬದುಕಿನ ಅಭಿವ್ಯಕ್ತಿಯಾಗಿ ರಚಿಸಿದ್ದು ಕೂಡ ಬದುಕಿನ ಸಾರವನ್ನು. ಅದು ಮುಕ್ತವಾದ, ಪ್ರಾಮಾಣಿಕವಾದ ಅಭಿವ್ಯಕ್ತಿ. ಇಂಥ ಅಭಿವ್ಯಕ್ತಿಯಾದ ವಚನಗಳ ಮೂಲಕವಾಗಿಯೇ ಅವರು ಮನುಕುಲಕ್ಕೆ ನೀಡಿದ ಸಂದೇಶವನ್ನು ಗುರುತಿಸಿಕೊಳ್ಳಬಹುದು. ಒಂದು

ದೃಷ್ಟಿಯಿಂದ ವಿಚಾರಿಸಿದಾಗ ಯಾವುದೇ ಒಂದು ಸಂದೇಶವನ್ನು ಕೊಡುವ ಉದ್ದೇಶದಿಂದಲೇ ಶರಣರು ಬದುಕಿದವರಲ್ಲ, ಬರೆದವರಲ್ಲ, ಅವರ ಬದುಕು ನಿಜದ ಅನ್ವೇಷಣೆ. ಈ ಹಿನ್ನೆಲೆಯಲ್ಲಿ ಶಿವಶರಣೆಯರ ಇಡೀ ಬದುಕೇ ಒಂದು ಸಂದೇಶವಾಗುತ್ತದೆ. ಒಮ್ಮೆ ಗಾಂಧೀಜಿಯವರಿಗೆ ನಿಮ್ಮ ಜೀವನ ಸಂದೇಶವೇನು ? ಎಂದು ಕೇಳಿದಾಗ — "My life is My message" ನನ್ನ ಜೀವನವೇ ನನ್ನ ಸಂದೇಶವೆಂದು ಹೇಳಿದರಂತೆ. ಇಲ್ಲಿ ತಾತ್ಪರ್ಯವೆಂದರೆ ಜ್ಞಾನಿಗಳ ಬದುಕು-ಬರಹಗಳೆರಡರಲ್ಲಿಯೂ ಅನುಕರಣಯೋಗ್ಯವಾದ ಅಂಶಗಳಿರುತ್ತವೆ. ಈ ಅರ್ಥದಲ್ಲಿಯೇ ಶಿವಶರಣೆಯರ ಸಂದೇಶವನ್ನು ನೋಡಬಹುದು.

ಮುಖ್ಯವಾಗಿ ಶಿವಶರಣೆಯರ ಕಾಲ ೧೨ನೆಯ ಶತಮಾನ. ಈ ಕಾಲಾವಧಿಯಲ್ಲಿಯೇ ಅಸಂಖ್ಯಾತ ಶರಣ–ಶರಣೆಯರು ಆಗಿ ಹೋದರು. ಇದುವರೆಗೂ ಸುಮಾರು ೩೧ ವಚನಕಾರ್ತಿಯರ ವಚನಗಳು ದೊರೆತಿವೆ. ಇನ್ನು ಕೆಲವು ಶಿವಶರಣೆಯರ ಹೆಸರುಗಳು ಸಿಗುತ್ತವೆ. ಆದರೆ ಅವರ ವಚನಗಳು ಸಿಗುವದಿಲ್ಲ. ವಚನಗಳು ದೊರೆಯದ ಅನೇಕ ಶರಣೆಯರ ಹೆಸರುಗಳು ಬಸವ ಪುರಾಣ, ಗುರುರಾಜ ಚಾರಿತ್ರ ಮೊದಲಾದ ವೀರಶೈವ ಪುರಾಣಗಳಲ್ಲಿ ಸಿಗುತ್ತವೆ. ನಿರಂಜನದ ಧವಳಾಯಿ, ಹುಗ್ಗಿಯ ದುಗ್ಗಳವ್ವೆ, ಸಾಯಿದೇವಿ, ನೇಮದ ವೀರಸಂಗವ್ವೆ, ದಂಡಿಗೆಯ ಗುಡ್ಡಾದೇವಿ, ದೇವಲಾಂಬಿಕೆ, ಕೇಳಿಕೆಯ ಮಹಾದೇವಿ, ಸೇವಕರ ಗೌರವ್ವೆ, ಹೂವಿನ ಅಲ್ಲಮದೇವಿ, ಶಿವಮಾಯಿದೇವಿ ಮೊದಲಾದ ಶರಣೆಯರ ಹೆಸರುಗಳು ಅವರ ಕಾಯಕವನ್ನು

ಸೂಚಿಸುತ್ತವೆ. ಉಗ್ಗಡಿಸುವ ವೀರಾದೇವಿ ಪ್ರತಿದಿನ ಭಕ್ತರಿಗೆ ವಚನಗಳನ್ನು ಭಾವಪೂರ್ಣವಾಗಿ ಓದಿ ಹೇಳುವ ಕಾಯಕದವಳು. ಸಿದ್ಧದೇವಮ್ಮ ಜನಪದ ನಾಟ್ಯ-ಸಂಗೀತಗಳಲ್ಲಿ ಪ್ರವೀಣಳಾಗಿದ್ದು, ಈ ಕಲೆಯನ್ನೇ ಕಾಯಕವನ್ನಾಗಿ ಮಾಡಿಕೊಂಡು ಶರಣಸಂದೇಶ-ವನ್ನು ಜನರಲ್ಲಿ ಹರಡಿದವಳು. ಶಿವಮಾಯಿದೇವಿ ಶರಣೆಯರಿಗೆ ಪುರಾಣ ಹೇಳುವ ಕಾಯಕದವಳು. ಸಾಯಿದೇವಿ ಭಕ್ತರ ಮನೆಯಲ್ಲಿ ರಂಗವಲ್ಲಿ ಯಿಕ್ಕುವ ಕಾಯಕದವಳು. ಸೇವಕರ ಗೌರವ್ವೆ ಎಂಬ ಶರಣೆ ಕಲ್ಯಾಣದಲ್ಲಿದ್ದು ಭಕ್ತರ ಮನೆಗಳಲ್ಲಿ ಮಂಗಲ ಕಾರ್ಯಗಳಾದಾಗ, ಶಿವಭಕ್ತರ ಗೋಷ್ಠಿ, ಮೆರವಣಿಗೆಗಳ ಕಾಲ-ದಲ್ಲಿ ದಾರಿಯನ್ನು ಬಿಡಿಸುವ ಕಾಯಕದವಳು. ಹೂವಿನ ಅಲ್ಲಮ ದೇವಿ ಚಂಗಣಗಿಲ ದಂಡೆಯನ್ನೇ ಲಿಂಗಕ್ಕೆ ಅರ್ಪಿಸುವ ನಿಯಮದವಳು. ಕೇಳಿಕೆಯ ಮಹಾದೇವಿ ಕರ್ಪೂರದ ವೀಳ್ಯೆಯ-ವನ್ನೇ ಲಿಂಗಕ್ಕೆ ಅರ್ಪಿಸುವವಳು. ಗಂಗಾದೇವಿ ನಿತ್ಯವೂ ಗಣಂಗ-ಳಿಗೆ ರುದ್ರವೀಣೆ ಕೇಳಿಸುವ ಕಾಯಕದವಳು. ವರದಾನಿ ಗುಡ್ಡವ್ವೆ ಮನೆಗೆ ಬಂದವರಿಗೆ ತಾನು ಕಂಡ ಶಿವಯೋಗ ಮಾರ್ಗದ ರಹಸ್ಯ ತಿಳಿಸುವವಳು. ಹೀಗೆ ಶರಣೆಯರು ತಮ್ಮ ಸಾಧನೆ-ಸಿದ್ಧಿಗಳಿಂದ ಶಿವಮಯ ಬದುಕನ್ನು ಬದುಕಿ, ಅಂತಹ ಬದುಕಿನ ಅನುಭವಗಳನ್ನು ಅಭಿವ್ಯಕ್ತಗೊಳಿಸಿರುವದು ನಮ್ಮ ಪುಣ್ಯವಿಶೇಷ ವೆನ್ನಬಹುದು.

ಈ ಶರಣೆಯರೆಲ್ಲ ಭಿನ್ನ ಪ್ರದೇಶ, ವರ್ಗ, ಜಾತಿಗಳಿಂದ ಬಂದವರಾಗಿದ್ದಾರೆ. ಅಕ್ಕನಾಗಮ್ಮ, ನೀಲಾಂಬಿಕೆ, ಗಂಗಾಂಬಿಕೆ ಬಸವಣ್ಣನ ಪರಿವಾರದಲ್ಲಿದ್ದು. ಸಮಾಜದ ಪ್ರತಿಷ್ಠಿತ ವರ್ಗದವ-

ರಾಗಿದ್ದರು, ಸತ್ಯಕ್ಕ, ಕೊಟ್ಟಣದ ಸೋಮಮ್ಮ, ಕದಿರ ಕಾಯಕದ ಕಾಳವ್ವೆ, ಸೂಳೆ ಸಂಕವ್ವೆ ಮುಂತಾದವರು ಸಾಮಾನ್ಯ ವರ್ಗದ ಮಹಿಳೆಯರು. ಬೊಂತಾದೇವಿ (ನಿಜವಾದ ಹೆಸರು ನಿಜ-ದೇವಿ) ಮೋಳಿಗೆಯ ಮಹಾದೇವಿ ಕಾಶ್ಮೀರದವರಾದರೆ, ಗೊಗ್ಗವ್ವೆ ಕೇರಳದವಳು. ಹೀಗೆ ಅನೇಕರು ಅನೇಕ ಜಾತಿ, ವರ್ಗ ಮತ್ತು ಪ್ರದೇಶಗಳಿಂದ ಬಂದವರಾದರೂ 'ಜೀವ ಶಿವನಾಗುವ' ಒಂದೇ ಒಂದು ಉದ್ದೇಶಕ್ಕಾಗಿ ಒಂದೇ ನೆಲೆಯಲ್ಲಿ ನಿಂತರು, ನುಡಿದರು. ಆಗ ಅವರ ಮುಂದಿದ್ದುದು ಅಮೂಲ್ಯವಾದ ಮಾನವಜೀವನ. ನಿತ್ಯಜೀವನವನ್ನು ಚೆನ್ನಾಗಿ ಬದುಕುವುದರ ಮೂಲಕ ಜೀವನವನ್ನೇ ನಿತ್ಯವನ್ನಾಗಿ ಮಾಡಬೇಕೆಂಬ ಹಂಬಲ ಹೊತ್ತವರು. ಈ ಹಿಂದೆ ಹೇಳಿದಂತೆ ಶಿವಶರಣೆಯರ ಸಮಗ್ರ ಬದುಕೇ ಒಂದು ಸಂದೇಶ. ಅಂದರೆ ಅವರ ಬದುಕಿನ ಸಂದೇಶವೇ ಜೀವ-ಶಿವನಾಗುವುದಾಗುತ್ತದೆ. ಹಾಗೆಂದ ಮಾತ್ರಕ್ಕೆ ಅವರು ಲೌಕಿಕ ಸಂಬಂಧವನ್ನು ಕಳಚಿ ಹಾಕಿದವರಲ್ಲ ಅವರ ಬದುಕು ಮುಖ್ಯವಾಗಿ ಧಾರ್ಮಿಕ, ಪ್ರಾಸಂಗಿಕವಾಗಿ ಸಾಮಾಜಿಕ, ಸಾಹಿತ್ಯಿಕ. ಹೀಗೆ ಮೂರು ವಲಯಗಳಲ್ಲಿ ಮುಖ ಚಾಚಿದೆಯೆನ್ನಬಹುದು.

——

೨. ಧಾರ್ಮಿಕ ಮುಖ

ಶಿವಶರಣೆಯರು ಹೊಂದಿದ್ದ ತತ್ತ್ವನಿಷ್ಠೆ ಮತ್ತು ಅವರು ಸಾಧಿಸಿದ ಆಧ್ಯಾತ್ಮಿಕ ಔನ್ನತ್ಯವನ್ನು ಧಾರ್ಮಿಕ ವಲಯದಲ್ಲಿ ಪ್ರಮುಖವಾಗಿ ಪರಿಗಣಿಸಬೇಕಾಗುತ್ತದೆ.

೧. **ತತ್ತ್ವನಿಷ್ಠೆ :** ಶಿವಶರಣ-ಶರಣೆಯರು ತಾವು ನಂಬಿದ್ದ ತತ್ತ್ವಗಳನ್ನು ಕೇವಲ ಅರಿಯುತ್ತಿದ್ದಿಲ್ಲ; ಅರಗಿಸಿಕೊಂಡಿದ್ದರು. ಅವರು ತತ್ತ್ವಗಳನ್ನು ಅಂಟಿಸಿಕೊಂಡಾಗಲಿ, ಅವುಗಳಿಗೆ ಅಂಟಿಕೊಂಡಾಗಲಿ ನಡೆದವರಲ್ಲ. ಸ್ವತಃ ತತ್ತ್ವವೇ ಆಗಿ ಬದುಕಿದವರು. ಅಂತೆಯೇ ಅವರ ತತ್ತ್ವನಿಷ್ಠೆಯಲ್ಲಿ ಒಂದು ಜವೆಯಷ್ಟು ಅಂತರವನ್ನು ಕಾಣಲಾರೆವು. ಶಿವಶರಣೆಯರ ಜೀವನದಲ್ಲಿ ತತ್ತ್ವನಿಷ್ಠೆಗೆ ಒರೆಗಲ್ಲಾದ ಅನೇಕ ಸನ್ನಿವೇಶಗಳು ಎದುರಾಗಿರುವುದನ್ನು ಕಾಣಬಹುದಾಗಿದೆ. ಅವುಗಳಲ್ಲಿ ಒಂದೆರಡು ನಿದರ್ಶನಗಳನ್ನಿಲ್ಲಿ ಕೊಡಬಹುದು.

ಆಯ್ದಕ್ಕಿ ಲಕ್ಕಮ್ಮ- ಮಾರಯ್ಯನವರು ಶರಣ ದಂಪತಿಗಳು. ದಿನವೂ ಸುಪ್ರಭಾತದಲ್ಲಿ ಮಾರಯ್ಯನವರು ಮಡಿಯಿಂದ ಹೋಗಿ ಶರಣರ ಮನೆಯಂಗಳದಲ್ಲಿ, ಹೊಲದಲ್ಲಿ ಸೂಸಿದ ಅಕ್ಕಿಯನ್ನು ಆಯ್ದು ತಂದರೆ, ಶರಣೆ ಲಕ್ಕಮ್ಮ ಅಡಿಗೆ ಮಾಡಿ

ದಾಸೋಹಕ್ಕೆ ಅಣಿಮಾಡುತ್ತಿದ್ದಳು. ಗುರು-ಲಿಂಗ-ಜಂಗಮರ ಸಂತೃಪ್ತಿಯಾದ ಬಳಿಕ ಶೇಷ ಪ್ರಸಾದವನ್ನು ಶಿವಪ್ರಸಾದವೆಂದು ಭುಂಜಿಸಿ ಸುಖಿಗಳಾಗುತ್ತಿದ್ದರು. ಈ ರೀತಿ ನಡೆದಿರುವ ಅವರ ಜೀವನ ಕ್ರಮದಲ್ಲಿ ಒಂದು ದಿನ ಮಾರಯ್ಯನವರು ದಿನದ ಅವಶ್ಯಕತೆಗಿಂತ ಹೆಚ್ಚಿನ ಅಕ್ಕಿಯನ್ನು ತಂದಾಗಿತ್ತು. ಅದು ಅವರು ನಂಬಿದ್ದ ತತ್ತ್ವದ ಬಗೆಗಿನ ನಿಷ್ಠುರವಾದ ಪರೀಕ್ಷೆಯ ಕ್ಷಣವೂ ಆಗಿತ್ತೆನ್ನಬಹುದು. ಈ ಸನ್ನಿವೇಶದ ಹಿನ್ನೆಲೆಯಲ್ಲಿ ಲಕ್ಕಮ್ಮ ನುಡಿದ,

ಆಸೆಯೆಂಬುದು ಅರಸಿಂಗಲ್ಲದೆ
ಶಿವಭಕ್ತರಿಗುಂಟೆ ಅಯ್ಯಾ ?
ರೋಷವೆಂಬುದು ಯಮದೂತರಿಗಲ್ಲದೆ
ಅಜಾತರಿಗುಂಟೆ ಅಯ್ಯಾ ?
ಈಸಕ್ಕಿಯಾಶೆ ನಿಮಗೇಕೆ ? ಈಶ್ವರನೊಪ್ಪ
ಮಾರಯ್ಯಪ್ರಿಯ ಅಮಲೇಶ್ವರಲಿಂಗಕ್ಕೆ ದೂರ
ಮಾರಯ್ಯ.

ಎಂಬ ಮಾತುಗಳು ಮಾರಯ್ಯನವರನ್ನು ಕೂಡ ಒಂದು ಕ್ಷಣ ಅಲುಗಾಡಿಸಿ ಬಿಟ್ಟಂತಿವೆ. ಪರಮಾತ್ಮನು ಸೃಷ್ಟಿಯಲ್ಲಿ ಮನುಷ್ಯರ ಆವಶ್ಯಕತೆಗಳನ್ನು ಪೂರೈಸುವಷ್ಟು ಸಮೃದ್ಧಿಯನ್ನು ಕೊಟ್ಟಿದ್ದಾನೆ. ಆದರೆ ಮನುಷ್ಯನ ಆಶೆಗಳನ್ನು ಪೂರೈಸುವಷ್ಟನ್ನಲ್ಲ. ನಮ್ಮ ಆವಶ್ಯಕತೆಯಷ್ಟೆ ವಸ್ತುಗಳನ್ನು ನಾವು ಬಳಸಿದರೆ ಈ ಲೋಕದಲ್ಲಿ ಎಲ್ಲರಿಗೂ ಎಲ್ಲವೂ ಸಿಗುತ್ತದೆ. ಮನುಷ್ಯನ ಲೋಭ,

ಅತಿಯಾಶೆಗಳು ಸಮೃದ್ಧಿಯ ನಡುವೆಯೂ ಕೊರತೆಯನ್ನು ಹುಟ್ಟಿಸಬಲ್ಲವು. ಬಹುಶಃ ಮಾರಯ್ಯನವರು ಜಾರಿದ್ದು ಇಂತಹ ದೌರ್ಬಲ್ಯದ ಒಂದು ಕ್ಷಣವೇ ಆಗಿರಬೇಕು. ಆಶೆ ಎನ್ನುವದು ಅರಸನಿಗಲ್ಲದೆ ಶಿವಭಕ್ತರಿಗೆ ಸಲ್ಲದು. ಈಸಕ್ಕಿಯಾಶೆ ನಿಮಗೇಕೆ? ಈಶ್ವರನೊಪ್ಪ – ಎನ್ನುವಂಥ ಮಾತು ತೂಕತಪ್ಪಿದ ಪತಿಯನ್ನು ಎಚ್ಚರಿಸುವಂಥಹದು. ಇಲ್ಲಿ ಶರಣೆ ಲಕ್ಕಮ್ಮನ ತತ್ತ್ವನಿಷ್ಠೆಯನ್ನೂ, ಆಕೆ ಅರಗಿಸಿಕೊಂಡು ತತ್ತ್ವದ ಅರಿವನ್ನೂ ಕಾಣಬಹುದು.

ಇಂತಹದೇ ಇನ್ನೊಂದು ಸನ್ನಿವೇಶ ಶಿವಶರಣೆ ಮೋಳಿಗೆ ಮಹಾದೇವಮ್ಮನಿಗೆ ಸಂಬಂಧಿಸಿದ್ದು. ಪೂರ್ವಾಶ್ರಮದಲ್ಲಿ ಕಾಶ್ಮೀರ ದೇಶದ ರಾಜ-ರಾಣಿಯರಾಗಿದ್ದ ಮೋಳಿಗೆಯ ಮಾರಯ್ಯ ಮತ್ತು ಅವನ ಧರ್ಮಪತ್ನಿ ಮಹಾದೇವಮ್ಮ ಶರಣರ ಕೀರ್ತಿಕೇಳಿ ಕಲ್ಯಾಣಕ್ಕೆ ಬಂದು ನೆಲೆಸಿರುತ್ತಾರೆ. ಕಟ್ಟಿಗೆ ಕಾಯಕದಿಂದ ದಾಸೋಹ ನಡೆಸುತ್ತಿರುತ್ತಾರೆ. ಒಂದು ದಿನ ಮಾರಯ್ಯನವರು ಇದುವರೆಗೆ ಶಿವಭಕ್ತಿ ಮಾಡಿದ್ದಾಯಿತು. ಇನ್ನು ಲಿಂಗೈಕ್ಯರಾಗಬೇಕೆಂಬ ಬಯಕೆಯನ್ನು ವ್ಯಕ್ತಪಡಿಸುತ್ತಾರೆ. ಆಗ ಅವರ ಸತಿ ಮಹಾದೇವಮ್ಮ ಇಂದು ನೀವು ಐಕ್ಯರಾಗಬೇಕೆಂದು ಬಯಸುತ್ತಿದ್ದರೆ ಇದುವರೆಗೆ ಏನಾಗಿದ್ದಿರಿ? "ಕೈಯಲ್ಲಿ ಜ್ಯೋತಿಯ ಹಿಡಿದು ಕತ್ತಲೆಯೆನಲೇತಕ್ಕೆ? ನಿತ್ಯ ಅನಿತ್ಯವ ತಿಳಿದು ಮರ್ತ್ಯ ಕೈಲಾಸವೆಂಬುದು ಭಕ್ತರಿಗೆ ಯುಕ್ತಿಯಲ್ಲ" ಎಂದು ಪ್ರಶ್ನಿಸುತ್ತಾಳೆ. ಇದು ಮಾರಯ್ಯನವರಿಗೆ ಹೇಗೋ ಆವರಿಸಿದ್ದ ಗಾಢ ಕತ್ತಲೆಯ ಮಧ್ಯ ಫಳಕ್ಕನೆ

ಬೆಳಕು ಮೂಡಿದಂತಾಗುತ್ತದೆ. ಮಹಾದೇವಮ್ಮನ ವ್ಯಕ್ತಿತ್ವವೇ ಅಷ್ಟು ಪ್ರಭಾವಶಾಲಿ. ನಿಜಲಿಂಗದ ರೂಪವನ್ನು ತಿಳಿದ ಅವಳು "ಕೈಯಲ್ಲಿ ಜ್ಯೋತಿಯ ಹಿಡಿದು ಕತ್ತಲೆಯೆನಲೇತಕ್ಕೆ?" ಎಂಬ ಒಂದೇ ಮಾತಿನಿಂದ ಪತಿಯ ಸಂಶಯವನ್ನು ನಿವಾರಿಸುತ್ತಾಳೆ. ಮರ್ತ್ಯ ಕೈಲಾಸವೆಂಬ ಭೇದ ಭಕ್ತರಿಗೆ ಸರಿಯಲ್ಲ. ಮರ್ತ್ಯದಲ್ಲಿದ್ದಾಗಲೂ ನಿಜವಾದ ಭಕ್ತ ಮುಕ್ತನೇ! ಇದು ಅವಳ ಉನ್ನತ ನಿಲುವನ್ನು ತತ್ತ್ವನಿಷ್ಠೆಯನ್ನು ತೋರಿಸುತ್ತದೆ.

ಇಂತಹದೇ ಇನ್ನೊಂದು ಸನ್ನಿವೇಶ ಬಸವಣ್ಣನವರ ಸತಿ ನೀಲಾಂಬಿಕೆಯ ಲಿಂಗೈಕ್ಯದ ಸಮಯದಲ್ಲಿ ಬರುವಂತಹದು. ಬಸವಣ್ಣನವರು ಕೂಡಲಸಂಗಮದತ್ತ ತೆರಳುವಾಗ ತಮ್ಮ ಆಪ್ತ ಸಚಿವನಾಗಿದ್ದ ಹಡಪದ ಅಪ್ಪಣ್ಣನವರ ಮೂಲಕ ಪ್ರಿಯಸತಿ ನೀಲಲೋಚನೆಗೆ ತಾವು ಸಂಗಮಕ್ಕೆ ಹೊರಟಿರುವದಾಗಿ ಕೂಡಲೆ ಬರಬೇಕೆಂಬುದಾಗಿ ಕರೆಕಳುಹುತ್ತಾರೆ. ಆ ಸಮಯದಲ್ಲಿ ಲಿಂಗಪೂಜೆಯಲ್ಲಿ ಲೀನಳಾಗಿದ್ದ ನೀಲಮ್ಮ "ನೋಡು ನೋಡು ನೋಡು ಲಿಂಗವೇ! ನೋಡು ಬಸವಯ್ಯನು ಮಾಡಿದಾಟವ! ಅಲ್ಲಿಗೆನ್ನನು ಬರಹೇಳಿದರಂತೆ! ಇಲ್ಲಿ ತಾನಿಲ್ಲವೆ ಸಂಗಯ್ಯನು? ಅಲ್ಲಿ ಇಲ್ಲಿ ಎಂಬ ಉಭಯ ಸಂದೇಹವು ಬಲ್ಲ ಮಹಾತ್ಮರಿಗಿದು ಗುಣವೇ? ಎಂದು ಉದ್ಗಾರ ತೆಗೆಯುತ್ತಾಳೆ. ಅಗಮ್ಯ, ಅಗೋಚರ, ಅಪ್ರತಿಮ ಲಿಂಗ ಕರಸ್ಥಲಕ್ಕೆ ಬಂದು ಚುಳುಕಾಗಿ-ರುವದು, ಸಂಗ ಸರ್ವವ್ಯಾಪಿ ಎಂಬುದು ಬಸವಣ್ಣನವರಿಗೆ ಅರಿಯದ ವಿಷಯವಲ್ಲ. ಮನಕ್ಷೋಭೆಯ ಆ ಕೊನೆಯ ಸನ್ನಿವೇಶ-ದಲ್ಲಿ ತಮ್ಮ ಸತಿಯನ್ನು ಕರೆಕಳುಹಿಸುವಾಗ ಮಾತ್ರ ಈ ಸೂಕ್ಷ್ಮವು

ಬಸವಣ್ಣನವರ ಚಿತ್ತದಲ್ಲಿ ಸುಳಿಯಲಿಲ್ಲ. ಆದರೆ ಪ್ರಾಣಾಂತಿಕ ಸನ್ನಿವೇಶದಲ್ಲಿಯೂ ನಂಬಿದ ತತ್ತ್ವಕ್ಕೆ ಅಚಲವಾಗಿ ಅಂಟಿಕೊಂಡಿದ್ದ ನೀಲಮ್ಮ ನಿಜದ ನೆಲೆಯನ್ನು ಕಾಣುತ್ತಾಳೆ. ತಾನು ನಂಬಿದ್ದ ತತ್ತ್ವನಿಷ್ಠೆಗೆ ಮೆರಗನ್ನು ತಂದುಕೊಡುತ್ತಾಳೆ. 'ಕಿನ್ನರಿ ತ್ರಿಪುರಾಂತಕಲಿಂಗ' ಎಂಬ ಅಂಕಿತದ ವಚನಕಾರ ತಾನು ಬೇರೆ ಬೇರೆ ಶರಣರಿಂದ ಏನೇನು ಕಲಿತೆ ಎಂದು ಹೇಳುತ್ತ, ನೀಲಮ್ಮನಿಂದ ಲಿಂಗಪೂಜೆಯನ್ನು ಕಲಿತಿರುವದಾಗಿ ಹೇಳಿರುವುದು ತುಂಬಾ ಅರ್ಥಪೂರ್ಣವೆನಿಸುತ್ತದೆ.

ಶಿವಶರಣೆಯರಾದ ಲಕ್ಕಮ್ಮ ಮಹಾದೇವಮ್ಮ ಹಾಗೂ ನೀಲಾಂಬಿಕೆಯರು ತಾವು ನಂಬಿದ ತತ್ತ್ವಗಳಾದ ಅಸಂಗ್ರಹ-ತತ್ತ್ವ, ಇಹದಲ್ಲಿಯೇ ಲಿಂಗೈಕ್ಯನಂತಿರುವ ತತ್ತ್ವ ಮತ್ತು ಜಗಭರಿತ ಲಿಂಗತತ್ತ್ವಗಳನ್ನು ಅರಿತು ಆಚರಿಸಿದ್ದಲ್ಲದೆ ಆ ತತ್ತ್ವಗಳ ಬಗೆಗೆ ಅವರು ತೋರಿದ ನಿಷ್ಠುರವಾದ ನಿಷ್ಠೆ ಪ್ರಶಂಸನೀಯವಾಗಿದೆ.

೨. ಆಧ್ಯಾತ್ಮಿಕ ಔನ್ನತ್ಯ: ಶಿವಶರಣರು ಮಾಡುವ ಮಾಟ-ದಿಂದಲೇ ಮತ್ತೊಂದನರಿತವರು. ಅಂತೆಯೇ ಅವರ ತತ್ತ್ವನಿಷ್ಠೆ ಅವರನ್ನು ಆಧ್ಯಾತ್ಮದ ಶಿಖರವನ್ನು ತಲುಪುವಂತೆ ಮಾಡಿತು. ಅಂತಹ ಎರಡು ಸಂದರ್ಭಗಳನ್ನಿಲ್ಲಿ ಉದಾಹರಿಸಬಹುದು. ಒಂದನೆಯದು ಮುಕ್ತಾಯಕ್ಕ ಹಾಗೂ ಅಜಗಣ್ಣರ ಜೀವನಕ್ಕೆ ಸಂಬಂಧಿಸಿದುದಾಗಿದೆ. ತನ್ನ ಪ್ರೀತಿಯ ಅಣ್ಣ, ಅರಿವಿನ ಗುರು ಅಜಗಣ್ಣನನ್ನು ಕಳೆದುಕೊಂಡ ಮುಕ್ತಾಯಕ್ಕ ಮುಂದುಗಾಣದೆ

ಪ್ರಲಾಪಿಸುತ್ತಿರುವಾಗ ಅಲ್ಲಮಪ್ರಭುಗಳು ಅದೇ ದಾರಿಯಲ್ಲಿ ಬರುತ್ತಾರೆ. ಇವಳ ದುಃಖವನ್ನು ಕಂಡು "ಅಂಗೈಯೊಳಗೊಂದು ಅರಳ್ದ ತಲೆಯ ಹಿಡಿದುಕೊಂಡು ಕಂಗಳ ಮತ್ತು ಪವಣಿಸುವಾಕೆ ನೀನಾರು ಹೇಳಾ ?" ಎಂದು ಪ್ರಶ್ನಿಸುತ್ತಾರೆ. ನಿನ್ನ ಅಣ್ಣನ ಸ್ಥಿತಿ ಸಾವಲ್ಲ, ಅದು ಐಕ್ಯ, ದುಃಖ ಸಲ್ಲದು ಎಂಬ ಸಮಾಧಾನವನ್ನು ಸೂಚಿಸುತ್ತಾರೆ. ಆಗ ಉಮ್ಮಳಿಸುವ ಮುಕ್ತಾಯಕ್ಕ ಅಣ್ಣನ ಸಾವನ್ನು—

ನೀರಬೊಂಬೆಗೆ ನಿರಾಳದ ಗೆಜ್ಜೆಯ ಕಟ್ಟಿ
ಬಯಲು ಬೊಂಬೆಯ ಕೈಯಲ್ಲಿ ಕೊಟ್ಟು
ಮುದ್ದಾಡಿಸುತ್ತಿರ್ದನಯ್ಯಾ
ಕರ್ಪುರದ ಪುತ್ಥಳಿಗೆ ಅಗ್ನಿಯ ಸಿಂಹಾಸನವನಿಕ್ಕಿ
ಅಗ್ನಿ ಕರಗಿ ಕರ್ಪುರ ಉಳಿದುದಕ್ಕೆ ಬೆರಗಾದನಯ್ಯಾ
ಎನ್ನ ಅಜಗಣ್ಣನ ಯೋಗಕ್ಕೆ

ಎಂಬುದಾಗಿ ಬೆಡಗಿನ ರೀತಿಯಲ್ಲಿ ವಿವರಿಸುತ್ತಾಳೆ. ಅಜಗಣ್ಣ ತನ್ನ ನಶ್ವರ ದೇಹಕ್ಕೆ ನಿರಾಕಾರದ ಗೆಜ್ಜೆಯನ್ನು ಕಟ್ಟಿ ಶೂನ್ಯದ ಕೈಯಲ್ಲಿ ಮುದ್ದಾಡಲು ಕೊಟ್ಟಿದ್ದ. ಅವನ ದೇಹವೆಂಬ ಕರ್ಪುರದ ಬೊಂಬೆಗೆ ಜ್ಞಾನಾಗ್ನಿ ಸಿಂಹಾಸನವೆನಿಸಿತು. ಲೋಕದ ನಿಯಮದಂತೆ ಕರ್ಪುರ ಕರಗಬೇಕು, ಅಗ್ನಿ ಉರಿಯಬೇಕು. ಇಲ್ಲಿ ಅದಕ್ಕೆ ವಿರುದ್ಧವಾಗಿ ಅಗ್ನಿ ಕರಗಿ, ಕರ್ಪುರ ಉಳಿಯಿತು, ಎಂಬುದಾಗಿ ಮುಕ್ತಾಯಕ್ಕ ವರ್ಣಿಸುವ ಅಜಗಣ್ಣನ ಸಾವಿನ ಬಣ್ಣನೆ ಮಾರ್ಮಿಕವಾದುದಾಗಿದೆ. ಇಂಥ ಅಪೂರ್ವ ವರ್ಣನೆ

ಮತ್ತೆ ಬೇರೆ ಕಡೆ ಸಿಗಲಾರದು. ಅಷ್ಟಕ್ಕೂ ಬಿಡದ ಪ್ರಭುದೇವರು ಮುಕ್ತಾಯಕ್ಕನನ್ನು ಕುರಿತು ಇಷ್ಟಲಿಂಗವನ್ನು ಅರಿತರೆ ಅಲ್ಲಿಯೇ ಅಜಗಣ್ಣ ಕಾಣಿಸುತ್ತಾನೆ ಎನ್ನುತ್ತಾರೆ. ಅದಕ್ಕೆ ಮುಕ್ತಾಯಕ್ಕ ಗುರುವಿನ ಮಹತ್ವವನ್ನು ಹೇಳುತ್ತಾಳೆ. ಪ್ರಭು ನಿನಗೆ ನೀನೇ ಗುರುವಾಗಬೇಕು ಎಂದ ಮಾತನ್ನು ಅವಳು ಒಪ್ಪುವದಿಲ್ಲ. ನನ್ನನ್ನು ನಾನು ತಿಳಿದಾಗಲೂ ನನ್ನ ಅರಿವೇ ನನಗೆ ಗುರುಸ್ಥಾನ-ದಲ್ಲಿ ನಿಲ್ಲುತ್ತದೆ ಎಂದು ನುಡಿಯುತ್ತಾಳೆ. ಅದಕ್ಕೆ ನಾನು ಶಿವಸ್ವರೂಪನಾಗುವವರೆಗೆ ಗುರುಬೇಕು. ನನಗೆ ನಾನೇ ಆದ ಮೇಲೆ ಗುರುವೇಕೆ? ಗುಹೇಶ್ವರ ಲಿಂಗದಲ್ಲಿ ಪರವೆಂದಲ್ಲಿ ಗುರುವುಂಟಲ್ಲದೆ ಸ್ವಯುವೆಂದಲ್ಲಿ ನುಡಿಯಲಿಲ್ಲ ಎಂಬ ಪ್ರಭುವಿನ-ವಾದ ಅವಳಿಗೆ ಸರಿಯೆನಿಸಲಿಲ್ಲ. "ಅದ್ವೈತವ ನೆಲೆಗೊಳಿಸಿ ಎರಡಳಿದೆನೆಂಬುದು ಶಿಶುಕಂಡ ಕನಸಿನಂತಿರಬೇಕಲ್ಲದೆ ನುಡಿದು ಹೇಳುವನ್ನಕ್ಕ ಭಿನ್ನವಲ್ಲವೆ ಹೇಳಾ ?" ಎಂದು ಅವಳು ದಿಟ್ಟತನ-ದಿಂದ ಪ್ರತಿನುಡಿದಾಗ ಪ್ರಭುವಿಗೆ ಸಂತೋಷವಾಗುತ್ತದೆ. ಪ್ರಭು ಶರಣರ ಮಾತು ಜ್ಯೋತಿರ್ಲಿಂಗ, ಅವರು ಶಬ್ದಸೂತಕಿಗಳಲ್ಲ-ವೆಂದರೂ ಮುಕ್ತಾಯಕ್ಕನಿಗೆ ಸಮಾಧಾನವಾಗದು. "ನುಡಿನುಡಿದು ಹೇಳುವವರೆಗೆ ನಡೆದುದೆಲ್ಲ ಹುಸಿಯೆಂಬೆನು ಕಂಡವರಿಗೆ ಕಡಿಮ್ಮೆ ಮಾತು ; ಕಾಣದವರಿಗೆ ಕಂಡಾಂಬಟ್ಟೆ ಮಾತು" ಎಂದು ಮಾತಿನ ಮೋಹವಳಿಯದ ಸಹಜ ಸ್ಥಿತಿಯನ್ನು ಸಂದೇಹದಿಂದ ನೋಡುತ್ತಾಳೆ. ಅವಳ ಮನಸ್ಸಿನ ಸಂಶಯಕ್ಕೆ ಪ್ರಭು ಕೊನೆಯ-ದಾಗಿ ಸರಿಯಾದ ರೀತಿಯಲ್ಲಿಯೆ ತಿಳಿಸುತ್ತಾನೆ. "ತನ್ನ ತಾನರಿವಡೆ ನುಡಿಯೆಲ್ಲ ಪರತತ್ತ್ವ. ತನ್ನ ತಾ ಮರೆದಡೆ

ನುಡಿಯೆಲ್ಲ ಮಾಯೆ...... ನಮ್ಮ ಗುಹೇಶ್ವರ ಲಿಂಗಕ್ಕೆ ನೀನು ಕರುಣದ ಶಿಶುವಾದ ಕಾರಣ ಬಾಯ್ದೆರೆವೆನಲ್ಲದೆ ಭಿನ್ನ ಉಂಟೇ ಹೇಳಾ ಮರುಳೆ? " ಎಂದು ನುಡಿ ತತ್ತ್ವವೂ ಹೌದು. ಮಾಯೆ-ಯೂ ಹೌದು. ಅರಿತು ಆಡಿದರೆ ತತ್ತ್ವ; ಅರಿಯದೆ ಆಡಿದರೆ ಮಾಯೆ: ಗುಹೇಶ್ವರನ ಕಾರುಣ್ಯದ ಶಿಶುವಾದ ಮುಕ್ತಾಯಕ್ಕ ಈಗ ಪ್ರಭುದೇವರ ಮಾತನ್ನು ಒಪ್ಪಿಕೊಳ್ಳುತ್ತಾಳೆ. ಇಲ್ಲಿ ಮುಕ್ತಾ-ಯಕ್ಕ ಪ್ರಭುವನ್ನು ಪರಿಪರಿಯಾಗಿ ಪ್ರಶ್ನಿಸುವ ರೀತಿ, ಅವಳ ನಿಶಿತಮತಿ, ಪ್ರಭುವಿಗೆ ಸರಿಸಾಟಿಯಾಗಿ ವಾದಕ್ಕಿಳಿಯುವ ಬಗೆ ಅವಳ ಆಧ್ಯಾತ್ಮದ ಆಳವನ್ನೇ ನಮ್ಮೆದುರು ತೆರೆದಿಟ್ಟು ತಲೆದೂಗು-ವಂತೆ ಮಾಡುತ್ತದೆ. ಇಲ್ಲಿ ಭಕ್ತಿ-ವಿರಕ್ತಿ-ಮುಕ್ತಿ ಮುಪ್ಪುರಿಗೊಂಡ ಮುಕ್ತಾಯಕ್ಕನ ಆಧ್ಯಾತ್ಮದ ಔನ್ನತ್ಯವನ್ನು ಕಾಣಬಹುದಾಗಿದೆ.

ಇನ್ನೊಂದು ಸಂದರ್ಭ, ಮಹಾದೇವಿಯಕ್ಕನ ಜೀವನಕ್ಕೆ ಸಂಬಂಧಿಸಿದುದಾಗಿದೆ. ಮಹಾದೇವಿಯಕ್ಕನ ಮಹೋನ್ನತ ನಿಲುವನ್ನು ಅನುಭವಮಂಟಪದಲ್ಲಿ ಪ್ರಭುದೇವರು ಪರೀಕ್ಷಿಸಿದ ಸನ್ನಿವೇಶದಲ್ಲಿ ಕಾಣಬಹುದು. ಮಹಾದೇವಿಯಕ್ಕ ಮಲೆನಾಡ ಪರಿಸರದ ಕನ್ಯೆ. ಚನ್ನಮಲ್ಲಿಕಾರ್ಜುನನಿಗೆ ಮನಸೋತವಳು. ಅವನನ್ನು ಕಾಣುವ ಹಾದಿಯಲ್ಲಿ ಹಲವು ಕಷ್ಟ ಸಹಿಸಿದವಳು. ಆದರೂ ಶರಣರು ಅವಳನ್ನು ಪರೀಕ್ಷಿಸಿಯೇ ತಮ್ಮಲ್ಲಿ ಸೇರಿಸಿ-ಕೊಳ್ಳುತ್ತಾರೆ. ಅವರು ಒಡ್ಡಿದ ಪ್ರಶ್ನೆಗಳಿಗೆಲ್ಲ ಸಮರ್ಪಕ ಉತ್ತರ ನೀಡುವಲ್ಲಿ ಅವಳ ಆಧ್ಯಾತ್ಮಿಕ ಮೇಲ್ಮೆಯನ್ನು ಕಾಣಬಹುದು.

ಅಕ್ಕ ಅನುಭವಮಂಟಪದಲ್ಲಿ ಬಂದುನಿಂತಾಗ ಅವಳನ್ನು ಭೇದಿಸುವ ಪ್ರಭುವಿನ ಪ್ರಶ್ನೆ—

ಉದಮದದ ಯೌವನವನೊಳಗೊಂಡ ಸತಿ ನೀನು
ಇತ್ತಲೇಕೆ ಬಂದೆಯವ್ವಾ?
ನಿನ್ನ ಪತಿಯು ಕುರುಹು ಹೇಳಿದರೆ ಬಂದು ಕುಳ್ಳಿರು;
ಅಲ್ಲವಾದರೆ ತೊಲಗು ತಾಯೆ.

ಈ ಗಡುಚಾದ ನುಡಿಗೆ ಬಂದ ಅಕ್ಕನ ಪ್ರತಿಕ್ರಿಯೆ ಕಳವಳವಲ್ಲ; ಶಾಂತಚಿತ್ತದ್ದು. ತಾನು ಅನಂತಕಾಲ ತಪಸ್ಸಿದ್ದು ಪಡೆದ ಪತಿಯ ಕುರುಹನ್ನು ಹೀಗೆ ಹೇಳಿದಳು.

ಗುರುವೆ ತೆತ್ತಿಗನಾದ
ಲಿಂಗವೇ ಮದುವಣಿಗನಾದ
ನಾನೆ ಮದುವಳಿಗೆಯಾದೆನು
ಈ ಭುವನವೆಲ್ಲವರಿಯಲು
ಅಸಂಖ್ಯಾತರೆನಗೆ ತಾಯಿ ತಂದೆಗಳು
ಕೊಟ್ಟರು ಸಾದೃಶ್ಯವಪ್ಪ ವರನ ನೋಡಿ
ಇದು ಕಾರಣ ಚನ್ನಮಲ್ಲಿಕಾರ್ಜುನನೆ ಗಂಡನೆನಗೆ.

ಇಲ್ಲಿ ಮಹಾದೇವಿಯಕ್ಕ ಶರಣಸತಿ ಲಿಂಗಪತಿ ಭಾವದಲ್ಲಿ ತನ್ನ ಹಾರೈಕೆ ಫಲಿಸಿ ಮನವೊಪ್ಪಿದ್ದ ಗಂಡನನ್ನೇ ಪಡೆದಿರುವದನ್ನು ಸೂಚಿಸುತ್ತಾಳೆ. ಮಹಾದೇವಿಯಕ್ಕ ಕೌಶಿಕರ ಸಂಬಂಧದ ಬಗೆಗೂ ಕೇಳಿದ್ದ ಪ್ರಭುದೇವ ಚನ್ನಮಲ್ಲಿಕಾರ್ಜುನನ್ನೇ ಪತಿಯನ್ನಾಗಿ ಸ್ವೀಕರಿಸಿರುವ ನಿನಗೆ ಈ ಕೇಶರಾಶಿಯ ಮರೆಯೇಕೆ ? ಎಂದು ಮರುನುಡಿಯುತ್ತಾನೆ. ಆಗ ಅಕ್ಕ "ಕಾಮನ ಮುದ್ರೆಯ ಕಂಡು,

ನಿಮ್ಮ ಶರಣರಿಗೆ ನೋವಾದೀತೆಂದು ಕೂದಲು ಮರೆಮಾಡಿರುವೆ, ದಿಗಂಬರವೇ ದಿವ್ಯಾಂಬರವೆನಗೆ" ಎನ್ನುತ್ತಾಳೆ. ಪ್ರಭುವಿನ ಮತ್ತೊಂದು ಪ್ರಶ್ನೆ ಮದುವೆಯಾಗುವಾಗ, ವಧು-ವರರಲ್ಲಿ ಸಮ-ರೂಪ ಸಮಗುಣ-ಸಮವಯಸ್ಸನ್ನು ಅಪೇಕ್ಷಿಸಲಾಗುತ್ತದೆ. ಮಹಾ-ದೇವಿಯಕ್ಕ ಹೇಳುವ ಮದುವೆಯಲ್ಲಿ ಅದು ಇಲ್ಲ. ವರ ರೂಪಿಲ್ಲದವನು; ವಧು ರೂಪವುಳ್ಳವಳು. ರೂಪಿಂಗೆ ಕೇಡುಂಟು; ನಿರೂಪಿಂಗೆ ಕೇಡಿಲ್ಲ. ಒಡಗೂಡಿದ ಬಗೆಯಂತೆನಲು ತಾನು ಅವನಂತೆ ಆದೆನೆಂದು, ಅದರ ವಿಧಾನವನ್ನು ವಿವರಿಸುತ್ತಾಳೆ—ದೇಹ ಸಂಬಂಧವಿರುವವರೆಗೆ ಪರಮಾತ್ಮನ ಅರಿವು ಅಂತರಂಗವನ್ನು ಮುಟ್ಟುವದಿಲ್ಲ ಎಂಬ ಪ್ರಭುವಿನ ಪ್ರಶ್ನೆಗೆ ಅಕ್ಕನ ಉತ್ತರ! "ಹಾವಿನ ಹಲ್ಲಕಳೆದು ಹಾವನಾಡಿಸಬಲ್ಲಡೆ ಹಾವಿನಸಂಗವೇ ಲೇಸು ಕಂಡಯ್ಯಾ" ಎಂಬುದು ಅಂದರೆ ಹಾವಿನ ವಿಷದ ಹಲ್ಲನ್ನು ತೆಗೆದು ಅದರೊಡನೆ ಆಟವಾಡುವಂತೆ. ಕಾಯವಿಕಾರವನ್ನು ಕಳೆದು ದೇಹದೊಡನೆ ಆಟವಾಡಬೇಕು. ಚನ್ನಮಲ್ಲಿಕಾರ್ಜುನನೊಲಿದವ-ರನ್ನು ಕಾಯವಿದ್ದವರು ಎನ್ನುವಂತಿಲ್ಲವೆನ್ನುತ್ತಾಳೆ. ಪ್ರಭು ಉತ್ತಮ ಪರೀಕ್ಷಕ, ಮತ್ತೆ ಅವನ ಪರೀಕ್ಷೆ ಮುಂದುವರೆಯುತ್ತದೆ.

ಕೂಡಲಿಲ್ಲದ ಘನವ ಕೊಡುವ ಪರಿ ಎಂತವ್ವ ?
ಹೇಳಿದರೆ ಅದಕ್ಕದೆ ಕೊರತೆ! ಚನ್ನಮಲ್ಲಿಕಾರ್ಜುನನ್ನು
ಒಳಹೊಕ್ಕು ಬೆರೆಸಿದೆನೆಂದು ಹೇಳುವುದನ್ನು ನಂಬಬೇಕೆ? ಎಂದಾಗ
ಗಟ್ಟಿತುಪ್ಪಕ್ಕೆ ತಿಳಿತುಪ್ಪಕ್ಕೆ ಭೇದವುಂಟೇ ಅಯ್ಯಾ
ದೀಪಕ್ಕೆ ದೀಪ್ತಿಗೆ ಭೇದವುಂಟೇ ಅಯ್ಯಾ ?

....
ಎನ್ನ ಲಿಂಗವನು ಶ್ರೀ ಗುರು ಮಂತ್ರವ ಮಾಡಿ
ತೋರಿದನಾಗಿ
ಸಾವಯ ನಿರವಯಕ್ಕೆ ಬಿನ್ನವಿಲ್ಲವಯ್ಯ;
ಚೆನ್ನಮಲ್ಲಿಕಾರ್ಜುನ ದೇವರ ಬೆರಸಿ ಮತಿಗೆಟ್ಟವಳ
ಏತಕ್ಕೆ ನುಡಿಸುವಿರಯ್ಯ, ಪ್ರಭುವೆ ?

ಭಾವಪರವಶಳಾಗಿ ಅಕ್ಕ ಉತ್ತರಿಸುತ್ತಾಳೆ. ಆಗಲೂ ಪ್ರಭು ಒಡ್ಡಿದ ಪರೀಕ್ಷೆ ಮುಗಿಯಲಿಲ್ಲ. ಅಕ್ಕನ ಮಾತನ್ನು 'ಅಪಕ್ವಸಿಯ ಕುರುಹು ' ಎಂದು ಚುಚ್ಚಿ ಆಡಿ—

ನಾ ಸತ್ತೆನೆಂದು ಹೆಣ ಕೂಗಿದುದುಂಟೆ?
....
ಹೆಪ್ಪಿಟ್ಟ ಹಾಲು ಸಿಹಿಯಪ್ಪುದೆ ?
ಈ ಮಾತು ಒಪ್ಪವಲ್ಲ ಗುಹೇಶ್ವರಲಿಂಗಕ್ಕೆ ?

ಎನ್ನುತ್ತಾನೆ. ಪ್ರಭುವಿನ ವಾದಸರಣಿಯ ಜಾಡನ್ನೇ ಹಿಡಿದು ಉತ್ತರಿಸುವ ಅಕ್ಕನ ಉತ್ತರ ಮಾರ್ಮಿಕವಾದುದಾಗಿದೆ. ಅಕ್ಕ "ಮರೆದೊರಗಿ ಕನಸಕಂಡು ಹೇಳುವಲ್ಲಿ ಸತ್ತ ಹೆಣ ಎದ್ದಿತ್ತು. ಹೆಪ್ಪಿಟ್ಟ ಹಾಲು ಗಟ್ಟಿ ತುಪ್ಪವಾಗಿ ಸಿಹಿಯಾಯಿತು." ಎನ್ನುತ್ತಾಳೆ.

ನಿದ್ದೆಗೊಮ್ಮೆ ನಿತ್ಯಮರಣವೆನ್ನುವಂತೆ, ಮಲಗಿರುವಾಗ ಮನುಷ್ಯ ಹೆಣವೇ ಆಗಿರುತ್ತಾನೆ. ಎಚ್ಚರದ ನವೀನ ಜನನ-

ದೊಂದಿಗೆ ಆ ಅನುಭವವನ್ನು ನೆನಪಿಸಿಕೊಂಡು ಹೇಳುತ್ತಾನೆ. ನನ್ನ ಇಂದಿನ ಸ್ಥಿತಿಯೂ ಇದಕ್ಕಿಂತ ಭಿನ್ನವಾಗಿಲ್ಲ ಎಂಬ ಅಕ್ಕನ ನಿರೂಪಣೆ ಪ್ರಭುದೇವರಾದಿಯಾಗಿ ಎಲ್ಲರಿಗೂ ಒಪ್ಪಿತವಾಗುತ್ತದೆ. ಎಲ್ಲ ಶರಣರು ಮನತುಂಬಿ ಹೊಗಳಿ ತಮ್ಮ ಗೌರವ ಸೂಚಿಸು-ತ್ತಾರೆ. 'ಅಜಕೋಟಿ ವರ್ಷದವರೆಲ್ಲ ಹಿರಿಯರಲ್ಲ. ಆ ಹಿರಿಯತನ ನಮ್ಮ ಮಹಾದೇವಿಯಕ್ಕಂಗಾಯಿತ್ತು' ಎಂದು ಚನ್ನಬಸವಣ್ಣ ಹೃದಯತುಂಬಿ ಹೇಳುತ್ತಾನೆ. ಕನಸಿನಲ್ಲಿಯೂ, ನನಸಿನಲ್ಲಿಯೂ ಮಹದೇವನನ್ನೆ ಮನದನ್ನನ್ನಾಗಿ ಮಾಡಿಕೊಂಡು, ಅಂತೆ ಆಚರಿಸಿದ ಅವಳಿಗಿಂತ ಹಿರಿಯರು ಬೇರೆ ಯಾರಿದ್ದಾರು! ಸಾವಿಲ್ಲದ ಕೇಡಿಲ್ಲದ ರೂಹಿಲ್ಲದ ಚೆನ್ನನನ್ನೊಲಿದ ಆಕೆ ಲೌಕಿಕನ ಪ್ರಣಯವನ್ನು ಧಿಕ್ಕರಿಸಿದವಳು. "ಗಂಡನೇ ದೇವರೆಂದು ತಿಳಿದು ಬೆಳೆದ ಸಮಾಜಕ್ಕೆ ದೇವರೇ ಗಂಡನಾಗಬಲ್ಲನೆಂಬುದನ್ನು ತೋರಿಸಿದಳು ಅಕ್ಕ" ಎಂಬ ಮಾತು ಅರ್ಥಪೂರ್ಣವಾದುದೆನಿಸುತ್ತದೆ (ಪು. ೭೩. ಕರ್ನಾಟಕದ ಕವಯಿತ್ರಿಯರು.)

ಶಿವಶರಣೆಯರ ಬದುಕಿನಲ್ಲಿ ಎದುರಾದ ಸನ್ನಿವೇಶಗಳ ಹಿನ್ನೆಲೆಯಲ್ಲಿ, ಜೀವನದಲ್ಲಿ ತತ್ತ್ವನಿಷ್ಠೆ ಮುಖ್ಯವಾದುದು. ಅದೇ ದಾರಿದೀಪ, ಮಾರ್ಗದರ್ಶಕ ಶಕ್ತಿ. ತತ್ತ್ವನಿಷ್ಠೆಗೆ ಚ್ಯುತಿ ತಂದುಕೊಂಡವರು ಯಾರಾದರೇನು? ಅವರಿಗೆ ತತ್ತ್ವದರಿವನ್ನು ಮಾಡಿಕೊಡುವುದೇ ತತ್ತ್ವನಿಷ್ಠರ ಕರ್ತವ್ಯವಾಗುತ್ತದೆ ಎಂಬ ಸಂದೇಶ ಸ್ಫುರಿಸುತ್ತದೆ. ಇನ್ನು ಮುಕ್ತಾಯಕ್ಕ ಮಹಾದೇವಿಯ-ಕ್ಕರ ಜೀವನದ ಸಂದರ್ಭಗಳು ಅಬಲೆ ಎಂದು ಅಲಕ್ಷ್ಯಕ್ಕೆ ಗುರಿ-ಯಾದ ಸ್ತ್ರೀ ಸಾಧಿಸಬಲ್ಲ ಉನ್ನತ ಬದುಕಿನ ಸಂದೇಶವನ್ನು ಸಾರುತ್ತವೆ.

——

೭. ಸಾಮಾಜಿಕ ಮುಖ

ಸಮಾಜವು ಅನೇಕ ಕುಟುಂಬಗಳ ಸಮೂಹ. ಕುಟುಂಬವು ಸಮಾಜದ ಮುಖ್ಯ ಘಟಕ. ಶರಣರ ಜೀವನವು ಸಾಮಾಜಿಕ ವಲಯದಲ್ಲಿ ಚಾಚಿದ ಮುಖದಿಂದ ಸ್ತ್ರೀ-ಪುರುಷರ ಸಮಾನತೆ, ವಿವಾಹ-ವೈರಾಗ್ಯ ಇವುಗಳ ಬಗೆಗೆ ಅವರ ನಿಲುವನ್ನು ಗಮನಿಸಬಹುದು. ಶಿವಶರಣ-ಶರಣೆಯರು ಸತಿ-ಪತಿಗಳಾಗಿ, ಸಮಾಜದ ಭಾಗವಾಗಿ ಸಾಮಾನ್ಯರಂತೆಯೇ ಬಾಳಿದ್ದಾರೆ ಎಂದೆನಿಸಿದರೂ ಅವರ ಈ ಸಂಬಂಧಗಳು ನಿಜವನರಿತು ಆಚರಿಸಿದವುಗಳು. ಅಂತೆಯೇ ತಮ್ಮ ಸುತ್ತಲಿನ ಸಮಾಜದ ಮಧ್ಯ ಹೊಸ ಪರಂಪರೆಯ ಹರಿಕಾರರಾಗಿ ಬದುಕಿದಾಗ ತಾವು ಅನುಭವಿಸಿದ ತಾಪ, ಸಮಾಜದ ವಕ್ರತೆಯನ್ನು ಕಂಡು ಸಾತ್ವಿಕ ಆಕ್ರೋಶ, ಆತ್ಮಸ್ಥೈರ್ಯ ವ್ಯಕ್ತಪಡಿಸಿದ್ದಾರೆ.

೧. **ಸ್ತ್ರೀ-ಪುರುಷರ ಸಮಾನತೆ:** ಹೆಣ್ಣು ಹುಟ್ಟು-ವದೇ ಬೇಡ. ಹುಟ್ಟಿದಾಗ ಸಿಗುವುದು ಅನಿವಾರ್ಯ ಸ್ವಾಗತ. ಇಂತಹ ವ್ಯವಸ್ಥೆಯಲ್ಲಿ ಮೊಲೆಮುಡಿ ಗಡ್ಡಮೀಸೆ ಅಂಗಕ್ಕೆ ಆತ್ಮಕ್ಕಲ್ಲ ಎಂಬ ಆದ್ಯ ವಚನಕಾರ ದೇವರದಾಸಿಮಯ್ಯ-ನವರ ನುಡಿ ಚೇತೋಹಾರಿಯಾಗಿ ಪರಿಣಮಿಸಿತು. ವಚನ ಕಾರರ ಉದಾರ ನಿಲುವು, ತನ್ಮೂಲಕ ತಾವು ಕೀಳಲ್ಲ ಎಂಬ

ಭಾವವನ್ನು ಕಿತ್ತೊಗೆಯಲು ಹವಣಿಸಿದ ಅನೇಕ ವಚನಗಳು ಶರಣೆಯರಲ್ಲಿವೆ. ನೀಲಮ್ಮ ತನ್ನ ಒಂದು ವಚನದಲ್ಲಿ "ಏಕೆನ್ನ ಪುಟ್ಟಿಸಿದೆಯಯ್ಯಾ ಹೆಣ್ಣು ಜನ್ಮದಲ್ಲಿ ಪುಣ್ಯವಿಲ್ಲದ ಪಾಪಿಯ? ನಾನು ಇಹ ಪರಕ್ಕೆ ದೂರಳಯ್ಯಾ!" ಎನ್ನುತ್ತಾಳೆ. ಬಹುಶಃ ನೀಲಮ್ಮ ಇಲ್ಲಿಗೆ ನಿಂತಿದ್ದರೆ ಸಾಮಾನ್ಯ ಸ್ತ್ರೀಯ ವ್ಯಥೆಯನ್ನೇ ವ್ಯಕ್ತಪಡಿಸಿದಂತಾಗುತ್ತಿತ್ತು. ಆದರೆ ಅವಳು ಮುಂದುವರೆದು "ಎನ್ನನಾಮ ಹೆಣ್ಣನಾಮವಲ್ಲವಯ್ಯಾ. ಬಸವನ ವಧುವಾದ ಕಾರಣ ಎನಗೆ ಹೆಣ್ಣನಾಮವಿಲ್ಲವಯ್ಯಾ" ಎನುತ್ತಾಳೆ. ಇಲ್ಲಿ ಸಮಾಜವು ಭಾವಿಸಿದ್ದ ಹೆಣ್ತನದ ಹೀನತೆಯನ್ನು ಕಳೆದುಕೊಂಡು ಮುನ್ನಡೆದಿರುವ ಅವಳ ವಿಚಾರ ದೃಷ್ಟಿಯ ಅಭಿವ್ಯಕ್ತಿಯನ್ನು ಕಾಣಬಹುದಾಗಿದೆ. "ನಾಮದಲ್ಲಿ ಹೆಂಗೂಸೆಂಬ ಹೆಸರಾದಡೇನು? ಭಾವಿಸಲು ಗಂಡುರೂಪು, ಬಸವಾ ನಿಮ್ಮ ದಯದಿಂದ" ಎಂಬ ಅಕ್ಕಮಹಾದೇವಿಯ ವಚನದಲ್ಲಿಯೂ ಇದೇ ಭಾವವನ್ನು ಕಾಣುತ್ತೇವೆ. "ಕೂಟಕ್ಕೆ ಸತಿ-ಪತಿಯೆಂಬ ನಾಮವಲ್ಲದೆ ಅರಿವಿಂಗೆ ಬೇರೊಂದೊಡಲುಂಟೆ ?" ಎಂದು ಆಯ್ದಕ್ಕಿಲಕ್ಕಮ್ಮ, "ನಿಮ್ಮ ಭಕ್ತಿಸೂತ್ರದಿಂದ ಎನ್ನ ಸ್ತ್ರೀ ಜಾತಿ ನಿಮ್ಮ ಶ್ರೀಪಾದದಲ್ಲಿ ಅಡಗಿತ್ತು ಎನಗೆ ಭಿನ್ನದ ಮಾತಿಲ್ಲ" ಎಂದು ಮೋಳಿಗೆಯ ಮಹಾದೇವಿ ಹೇಳುವಲ್ಲಿ ಸಾಂಪ್ರದಾಯಿಕ ಸಮಾಜದ ಸ್ತ್ರೀ-ಪುರುಷರ ನಡುವಿನ ಭಿನ್ನತೆಯನ್ನು ಅವರು ಸಕಾರಣವಾಗಿಯೇ ತಿರಸ್ಕರಿಸಿದ್ದಾರೆ. ಶರಣರ ಒಡನಾಟದಿಂದ ಅರಿವಿನ ಹಾದಿಯಲ್ಲಿ ಅಡಿಯಿರಿಸುತ್ತ ಜ್ಞಾನ-ಭಕ್ತಿಗಳನ್ನು ಸಂಪಾದಿಸಲು ಹೆಣ್ಣು-ಗಂಡೆಂಬ ಭೇದವಿಲ್ಲ-ವೆಂಬುದನ್ನು ಮನಗಂಡಿದ್ದಾರೆ.

ಸ್ತ್ರೀ-ಪುರುಷರಿಬ್ಬರೂ ಸಮಾನರು ಎಂದು ಪ್ರತಿಪಾದಿಸುವ ಗೊಗ್ಗವ್ವೆ ಎಂಬ ವಚನಕಾರ್ತಿ

ಮೊಲೆಮುಡಿ ಬಂದಡೆ ಹೆಣ್ಣೆಂಬರು
ಮೀಸೆಕಾಸೆ ಬಂದಡೆ ಗಂಡೆಂಬರು
ಈ ಉಭಯದ ಜ್ಞಾನ
ಹೆಣ್ಣೋ ಗಂಡೋ ನಾಸ್ತಿನಾಥ

ಎಂದು ಪ್ರಶ್ನಿಸುತ್ತಾಳೆ. ಪ್ರಾಕೃತಿಕ ಭೇದದಿಂದ ಸ್ತ್ರೀ-ಪುರುಷರಲ್ಲಿ ತರತಮಭಾವ ಸಲ್ಲಬಹುದು. ಆದರೆ ಜ್ಞಾನದ ದೃಷ್ಟಿಯಿಂದ ಅವರು ಸಮಾನರು ಎಂಬುದು ಅವಳ ನಿಲುವು. ಅಕ್ಕಮಹಾದೇವಿ "ಸ್ತ್ರೀಮಾಯೆ" ಎಂಬ ಪರಂಪರೆಯ ನಿಲುವನ್ನು "ಪುರುಷನ ಮುಂದೆ ಮಾಯೆ ಸ್ತ್ರೀಯೆಂಬ ಅಭಿಮಾನವಾಗಿ ಕಾಡುವುದು. ಸ್ತ್ರೀಯ ಮುಂದೆ ಮಾಯೆ ಪುರುಷನೆಂಬ ಅಭಿಮಾನ-ವಾಗಿ ಕಾಡುವುದು" ಎಂದು ಬಹು ಮಾರ್ಮಿಕವಾಗಿ ಅಲ್ಲಗಳೆಯುತ್ತಾಳೆ. ಇಲ್ಲಿ ಮಾನವನ ಅಜ್ಞಾನ, ಮನಸ್ಸಿನ ಮೇಲೆ ನಿಯಂತ್ರಣ ವಿಲ್ಲದಿರುವಿಕೆಯೆ ಮಾಯೆ. ಗಂಡಿಗೆ ಹೆಣ್ಣು ಮಾಯೆಯಾದರೆ, ಹೆಣ್ಣಿಗೆ ಗಂಡು ಕೂಡ ಮಾಯೆಯೆಂಬುದು ಬಹಳ ಮುಖ್ಯ-ವಾದುದು. ಮಾಯೆ ಇಬ್ಬರಿಗೂ ಸಮಾನವಾದುದು. ಅದು ತಿಳುವಳಿಕೆಯಲ್ಲಿದೆ. ಮನದ ಸೂತಕ ಹಿಂಗಿದಾಗ ಇಬ್ಬರಿಗೂ ಬಾಧೆಯಿಲ್ಲ. ಇಲ್ಲಿ ಹೆಣ್ಣು ತನ್ನ ಬಗೆಗೆ ವಿಶ್ಲೇಷಿಸಿಕೊಂಡ ಕ್ರಮ ಕಾಣುತ್ತೇವೆ. ಗಜೇಶಮಸಣಯ್ಯಗಳ ಪುಣ್ಯಸ್ತ್ರೀ (ಅವಳ ಹೆಸರು ಉಕ್ತವಾಗಿಲ್ಲ) "ಹೊನ್ನ ಬಿಟ್ಟು ಲಿಂಗವನೊಲಿಸಬೇಕೆಂಬರು. ಹೊನ್ನಿಂಗೆಯೂ, ಲಿಂಗಕ್ಕೆಯೂ ವಿರುದ್ಧವೆ? ಹೆಣ್ಣು ಬಿಟ್ಟು

ಲಿಂಗವನೊಲಿಸಬೇಕೆಂಬರು, ಹೆಣ್ಣಿಂಗೆಯೂ ಲಿಂಗಕ್ಕೆಯೂ ವಿರುದ್ಧವೆ ? " ಎಂದು ಪ್ರಶ್ನಿಸಿ ಅರಿವಿಂದ ಕಂಡೊದಗಿದ ಸುಖವೇ ಮುಖ್ಯವೆನ್ನುತ್ತಾಳೆ. ಹೆಣ್ಣಿಗೆ ಧಾರ್ಮಿಕ ಸ್ವಾತಂತ್ರ್ಯವಿಲ್ಲ; ಆಧ್ಯಾತ್ಮಮಾರ್ಗದಲ್ಲಿ ಅವಳೊಂದು ಅಡ್ಡಿ ಎಂಬ ಕಲ್ಪಿತ ಆರೋ-ಪವನ್ನು ಅವಳ ಮೇಲೆ ಹೊರಿಸಿ ಪುರೋಹಿತ ವರ್ಗ ಅವಳನ್ನು ಕೀಳುತನದ ಕೋಟೆಯಲ್ಲಿ ಇರಿಸಿದರು. ತಮ್ಮ ಸುತ್ತ ಕಟ್ಟಿದ ಈ ಕೋಟೆಯ ಒಂದೊಂದು ಕಲ್ಲುಗಳನ್ನು ಶರಣೆಯರು ಕೆಡವಿದರು.

೨. ಶಿವನನೊಲಿಸುವ ದಾಂಪತ್ಯ: ಶಿವನನೊಲಿಸುವ ವೈರಾಗ್ಯ: " ಸತಿಪತಿಗಳೊಂದಾದ ಭಕ್ತಿ ಹಿತವಪ್ಪುದು ಶಿವಂಗೆ " ಎಂಬ ಭಾವನೆಯಿಂದ ಬಾಳಿದ ಶರಣ-ಶರಣೆಯರ ಜೀವನದಲ್ಲಿ ಜೇಡರದುಗ್ಗಳೆ-ದಾಸಿಮಯ್ಯ, ಆಯ್ದಕ್ಕಿಲಕ್ಕಮ್ಮ-ಮಾರಯ್ಯ ಮೋಳಿಗೆಯ ಮಹಾದೇವಿ-ಮಾರಯ್ಯ ಮುಂತಾಗಿ ಸುಮಾರು ೧೯ರಷ್ಟು ಶರಣದಂಪತಿಗಳ ಹೆಸರುಗಳು ಕಾಣಸಿಗುತ್ತವೆ. ಇವರದು ಶಿವನೊಲಿಸುವ ದಾಂಪತ್ಯ. ಸತಿಯರಾಗಿ ಪತಿಗಳ ಮನಸ್ಸನ್ನು, ಪತಿಗಳಾಗಿ ತಮ್ಮ ಸತಿಯರ ಮನಸ್ಸನ್ನು ಆವರಿಸಿದ್ದಾರೆ. ಬಸವಣ್ಣನವರು " ಎನ್ನಸತಿ ನೀಲಲೋಚನೆ ಪೃಥ್ವಿಗಗ್ಗಳದ ಚೆಲುವೆ " ಎಂದು ನೀಲಮ್ಮನವರನ್ನು ಕುರಿತು ಮನಮೆಚ್ಚಿ ನುಡಿದಿದ್ದಾರೆ.

ಮಡದಿಯೆನಲಾಗದು ಬಸವಂಗೆ ಎನ್ನನು
ಪುರುಷನೆನಲಾಗದು ಬಸವನ ಎನಗೆ
ಉಭಯ ಕುಳವ ಹರಿದು ಬಸವಂಗೆ ಶಿಶುವಾನಾದೆನು
ಬಸವನೆನ್ನ ಶಿಶುವಾದನು

ಎಂಬುದಾಗಿ ನೀಲಲೋಚನೆ ಹೇಳಿಕೊಳ್ಳುವಲ್ಲಿ ಸತಿಪತಿಗಳ ಪ್ರೀತಿ ಸಮರಸತೆಗಳನ್ನೇ ಕಾಣಬಹುದು. ಮೋಳಿಗೆಯ ಮಾರಯ್ಯನ ವರನ್ನು ಮುಕ್ತಿಯ ಹಂಬಲದ ಕತ್ತಲೆ ಕವಿದಾಗ ಅದನ್ನು ತಿಳಿಸಿ ಹೇಳಿದ ತಮ್ಮ ಸತಿ ಮಹಾದೇವಿಯನ್ನು "ಎನ್ನ ಮುಕ್ತ್ಯಾಂಗನೆ" ಎಂದು ಕೊಂಡಾಡಿದ್ದಾರೆ. ನೀಲಮ್ಮ "ಬಸವನ ಅನುಭವದಿಂದ ವಿವರವ ಕಂಡು ವಿಚಾರಪತ್ನಿಯಾದೆನಯ್ಯಾ" ಎಂಬುದಾಗಿ ಹೆಮ್ಮೆ-ಯಿಂದ ಹೇಳಿಕೊಂಡಿದ್ದಾಳೆ. ಸತಿ-ಪತಿಗಳೊಂದಾಗಿ ಬಾಳಿದ ದಾಂಪತ್ಯ ಒಂದು ರಸಜೀವನ ಅಷ್ಟೇ ಅಲ್ಲ ಶಿವನಿಗೆ ಒಪ್ಪಿತವಾಗುವ ಹಿತವಪ್ಪ ಬಂಧುರ ಜೀವನ. ಇಂಥದು ಶಿವನನ್ನೊಲಿಸುವ ದಾಂಪತ್ಯ ಜೀವನವಾದರೆ ಮಹಾದೇವಿಯಕ್ಕನದು ಇದಕ್ಕಿಂತ ಭಿನ್ನವಾದ ಏಕಾಂಗಿ ಜೀವನ.

"ಹಸಿವಾದಡೆ ಭಿಕ್ಷಾನ್ನಗಳುಂಟು ತೃಷೆಯಾದಡೆ ಕೆರೆಹಳ್ಳ-ಭಾವಿಗಳುಂಟು. ಶಯನಕ್ಕೆ ಹಾಳು ದೇಗುಲಗಳುಂಟು. ಆತ್ಮ-ಸಂಗಾತಕ್ಕೆ ಚನ್ನಮಲ್ಲಿಕಾರ್ಜುನನುಂಟು" ಎಂದು ಏಕಾಂಗಿಯಾಗಿ ಶಿವನನ್ನು ಅರಸುತ್ತ ಹೊರಟವಳು ಆಕೆ. ಅವಳಿಗೆ 'ಚಿಕ್ಕ ಚಿಕ್ಕ ಜಡೆಗಳ ಸುಲಿಪಲ್ಲ ಗೊರವನ'ದೇ ಕನಸು. ಇಂತಹ ಸತಿ-ಪತಿ ಭಾವದ ಪಥದಲ್ಲಿ—

ಅಂಗವ ಲಿಂಗಮುಖಕ್ಕೆ ಅರ್ಪಿಸಿ ಅಂಗ
ಅನಂಗವಾಯಿತ್ತು
ಮನವ ಅರಿವಿಂಗರ್ಪಿಸಿ ಮನ ಲಯವಾಯಿತ್ತು;
ಭಾವ ತೃಪ್ತಿಗರ್ಪಿಸಿ ಭಾವ ಬಯಲಾಯಿತ್ತು;

ಅಂಗ ಮನ ಭಾವವಳಿದ ಕಾರಣ ಕಾಯ
ಅಕಾಯವಾಯಿತ್ತು.
ಎನ್ನ ಅಕಾಯ ಸುಖವ ಲಿಂಗ ಭೋಗಿಸುವನಾಗಿ
ಶರಣಸತಿ–ಲಿಂಗಪತಿಯಾದೆನು
ಇದು ಕಾರಣ, ಚೆನ್ನಮಲ್ಲಿಕಾರ್ಜುನಯ್ಯನೆಂಬ
ಗಂಡನ ಒಳಹೊಕ್ಕು ಬೆರಸಿದೆನು

ಎಂಬುದಾಗಿ ವಿವರಿಸಿದ್ದಾಳೆ. ಕಾಯ-ಅಕಾಯವಾಗಿ, ಅಂಗ-ಲಿಂಗವಾಗಿ, ಶರಣಸತಿ-ಲಿಂಗಪತಿಯನ್ನು ಸೇರುವ ರೀತಿ ಇಲ್ಲಿದೆ. ಇಹಕ್ಕೊಬ್ಬ ಗಂಡನನ್ನು ಪರಕ್ಕೊಬ್ಬ ಗಂಡನನ್ನು ಒಲ್ಲದ ಮಹಾದೇವಿಯಕ್ಕನದು ಶಿವನನೊಲಿಸುವ ವೈರಾಗ್ಯಜೀವನವಾಗುತ್ತದೆ. ಹೆಣ್ಣಿನ ಜೀವನಕ್ಕೆ ದಾರಿ ತೋರಬಲ್ಲ ಎರಡೂ ಮಾರ್ಗಗಳು ಶರಣೆಯರಲ್ಲಿವೆ. ಹೊಸ ಸಮಾಜ ವ್ಯವಸ್ಥೆಯೊಂದರ ರೂವಾರಿಗಳಾಗಿ ಬದುಕಿದ ಅವರು ಸ್ತುತಿ, ನಿಂದೆಗಳು ಬಂದರೆ ಕೋಪವ ತಾಳದೆ ಸಮಾಧಾನಿಯಾಗಿದ್ದವರು. ಮನದೊಡೆಯ ಮಹಾದೇವ ಮನವ ನೋಡಬೇಕೆಂದು ಮನುಜರ ಕೈಯಿಂದ ಒಂದೊಂದ ನುಡಿಸುವನೆಂದು ತಾಳ್ಮೆವಹಿಸಿದವರು.

೩. ಪ್ರತಿಭಟನೆಯ ಮನೋಭಾವ: ಅನ್ಯಾಯ ಕೆಟ್ಟದ್ದು ಅನ್ಯಾಯದ ಸಹನೆಯೂ ಕೆಟ್ಟದ್ದು. ಈ ಮನೋಭಾವದ ಶರಣ-ಶರಣೆಯರು ತಮ್ಮ ಸಮಕಾಲೀನ ಧಾರ್ಮಿಕ-ಸಾಮಾಜಿಕ ಸಂಪ್ರದಾಯಗಳಲ್ಲಿ ಸರಿಯಲ್ಲದವುಗಳನ್ನು ಪ್ರತಿಭಟಿಸುವ ಪ್ರಶ್ನಿಸುವ

ದಿಟ್ಟತನ ತೋರಿದರು. ನಡೆ-ನುಡಿಗಳ ಸಾಮರಸ್ಯವು ಅವರಲ್ಲಿ ಒಂದು ಜೀವಂತ ಮೌಲ್ಯವಾಗಿರುವದರಿಂದ ಈ ಪ್ರತಿಭಟನೆಗೆ ಒಂದು ಅರ್ಥವಿದೆ.

"ನಾ ತಿರುಹುವ ರಾಟೆಯು ಕುಲಜಾತಿಯು ಹೇಳಿರಣ್ಣಾ" ಎಂದು ಪ್ರಶ್ನಿಸುವ ಕದಿರ ರೆಮ್ಮವ್ವೆ ಹುಟ್ಟಿನಿಂದ ಜಾತಿಯನ್ನು ನಿರ್ಧರಿಸುವ ಸಂಪ್ರದಾಯುವನ್ನು ಖಂಡಿಸುತ್ತಾಳೆ. ಬೊಂತಾದೇವಿ "ಊರೊಳಗೆ ಬ್ರಾಹ್ಮಣ ಬಯಲು, ಊರ ಹೊರಗೆ ಹೊಲೆ ಬಯಲೆಂದುಂಟೆ? ಎಲ್ಲಿ ನೋಡಿದಡೆ ಬಯಲೊಂದೆ" ಎನ್ನುವಲ್ಲಿ ಸರ್ವವ್ಯಾಪಿಯಾದ ಪರಮಾತ್ಮನ ಅಸ್ತಿತ್ವವನ್ನು ಸೂಚಿಸಿ, ಬ್ರಾಹ್ಮಣದೇವರು-ಹೊಲೆಯರ ದೇವರು ಬೇರೆಯಲ್ಲವೆಂದಿದ್ದಾಳೆ. ಉರಿಲಿಂಗಪೆದ್ದಿಯ ಹೆಂಡತಿ ಕಾಳವ್ವೆ ಮಾದಿಗರನ್ನು ಕೀಳು ಜಾತಿಯವರೆಂದು ಪರಿಗಣಿಸುವದನ್ನು ಹೀಗೆ ವಿಡಂಬಿಸಿದ್ದಾಳೆ. "ಕುರಿ ಕೋಳಿ, ಕಿರುಮೀನು ತಿಂಬವರೆಲ್ಲ ಕುಲಜ ಕುಲಜರೆಂದೆಂಬರು. ಶಿವಗೆ ಪಂಚಾಮೃತವ ಕರೆವ ಪಶುವ ತಿಂಬ ಮಾದಿಗ ಕೀಳು ಜಾತಿಯೆಂಬರು. ಅವರೆಂತು ಕೀಳು ಜಾತಿಯಾದಾರು, ಜಾತಿಗಳು ನೀವೇಕೆ ಕೀಳಾಗಿರೋ?" ಎನ್ನುವಲ್ಲಿ ಜಾತಿ ಪದ್ಧತಿಯ ಬಗೆಗೆ ತನ್ನ ಸಾತ್ವಿಕ ಆಕ್ರೋಶವನ್ನು ಆಸ್ಫೋಟಿಸಿದ್ದಾಳೆ.

ವೇದ ಶಾಸ್ತ್ರಗಳು ಸ್ತ್ರೀಯನ್ನು ದೂರೀಕರಿಸಿದವು. ಆದರಂತೆ ಶರಣೆಯರು ವೇದ ಶಾಸ್ತ್ರಗಳನ್ನು ದೂರ ತಳ್ಳಿದರು. "ವೇದ ಶಾಸ್ತ್ರ ಆಗಮ ಪುರಾಣಗಳೆಲ್ಲವು ಕೊಟ್ಟಣವ ಕುಟ್ಟಿದ ನುಚ್ಚು ತೌಡು ಕಾಣಿಭೋ" ಎಂದು ಮಹಾದೇವಿಯಕ್ಕ ಜಡಗಟ್ಟಿದ

ವೈದಿಕ ಸಂಪ್ರದಾಯ ಈ ಗ್ರಂಥರಾಶಿಯನ್ನು ದೂರ ಸರಿಸುತ್ತಾಳೆ. ಪ್ರಾಣಿಹಿಂಸೆಗೆ ಪ್ರತಿರೋಧವನ್ನು ವ್ಯಕ್ತಪಡಿಸುತ್ತ–ಜಾಲಗಾರ ಜಲವ ಶೋಧಿಸಿ ಹಲವು ಪ್ರಾಣಿಯ ಕೊಂದು ನಲಿಯುತ್ತಾನೆ. ತನ್ನ ಮನೆಯಲ್ಲಿ ಶಿಶು ಸತ್ತರೆ ಅದಕ್ಕೆ ಮಮ್ಮಲನೆ ಮರುಗುವಂತೆ ಅವಕ್ಕೇಕೆ ಮರುಗ? ಎಂದು ಪ್ರಶ್ನಿಸಿ ಜೀವ ಹಿಂಸೆಯ ಸೂಕ್ಷ್ಮವನ್ನು ಪ್ರತಿಪಾದಿಸಿದ್ದಾಳೆ.

ಲಕ್ಕಮ್ಮ, ಅಮುಗೆರಾಯಮ್ಮ ತಾವು ಕಂಡ ಡಂಭಾಚಾರದ ವಿರಕ್ತರನ್ನು, ವ್ರತಹೀನರನ್ನು ತರಾಟೆಗೆ ತೆಗೆದುಕೊಂಡಿದ್ದಾರೆ.

> ಬೆಟ್ಟದ ನೆಲ್ಲಿಯ ಕಾಯ ಪಟ್ಟಣಕ್ಕೆ ಹೊತ್ತುಕೊಂಡು
> ಹೋಗಿ ಹೊಟ್ಟೆಯ ಹೊರವವನಂತೆ.
>
> (ಅಮುಗೆರಾಯಮ್ಮ)

ಆದ್ಯರ ವಚನಗಳನ್ನು ಹೇಳಿ ಅನ್ನ ಕೂಳಿಗೆ ಹರಿದಾಡುವವರನ್ನು ವಿರಕ್ತರೆನ್ನಲಾಗದು. ಜ್ಞಾನಿಗಳಾಗಿ ಜ್ಞಾನಪ್ರಸಾರ ಮಾಡುವವರೇ ನಿಜದ ವಿರಕ್ತರು. ಅದಿಲ್ಲದೆ ಬರಿ ವಚನಗಳನ್ನು ಹೇಳಿಕೊಂಡು ಹೊಟ್ಟೆ ಹೊರೆಯುವ ವಿರಕ್ತರನ್ನು ಕಂಡರೆ ಅಮುಗೆರಾಯಮ್ಮ ನಿಗೆ ಎಲ್ಲಿಲ್ಲದ ಕೋಪ. ನಿಜವಾದ ವಿರಕ್ತ "ವಾಯು ಬೀಸದ ಉದಕದಂತೆ; ಅಂಬುಧಿಯೊಳಗೆ ಕುಂಭ ಮುಳುಗಿದಂತೆ" ಇರಬೇಕು ಎಂಬುದು ಅವಳ ಅಭಿಪ್ರಾಯ.

ಶರಣೆಯರ ದೃಷ್ಟಿಯಲ್ಲಿ ಬರಿಯ ವ್ರತಾಚಾರ ಅರ್ಥ-ವಿಲ್ಲದ್ದು. ಪರಪಾಕವ ಬಿಡುವ ವ್ರತ. ಲವಣ ನಿಷೇಧ ವ್ರತ, ಸಪ್ಪೆಯ ವ್ರತಗಳನ್ನು ಅಕ್ಕಮ್ಮ ಟೀಕಿಸುತ್ತಾಳೆ. ಸಪ್ಪೆಯ ವ್ರತ

ಬರಿ ಲವಣವನ್ನು ಬಿಡುವದಲ್ಲ. ಸುಖ ದುಃಖಗಳನ್ನು ಅರಿಯದೇ ಇರುವದು ಸಪ್ಪೆಯ ವ್ರತವೆಂದಿದ್ದಾಳೆ. ಅವಳು ಹೇಳುವಂತೆ, ವ್ರತಾಚಾರವೆಂದರೆ "ಪರಸ್ತ್ರೀ ಪರಧನಂಗಳಲ್ಲಿ ನಿಂದೆಗೆ ಒಡ್ಡಲಾಗದಿದ್ದುದೆ ವ್ರತ: ಸರ್ವಭೂತ ಹಿತನಾಗಿ ದಯವಿದ್ದುದೆ ಆಚಾರ." ವ್ರತಾಚಾರ ಶುಚಿಯಾದ ವರ್ತನೆಯಲ್ಲಿ ಇದೆ ಎಂದು ನಂಬಿ ಆಚರಿಸಲು ಬಯಸಿರುವದು ವೇದ್ಯವಾಗುತ್ತದೆ. ತಮ್ಮ ನಂಬಿಕೆಗೆ ವ್ಯತಿರಿಕ್ತವಾದ ವ್ರತಹೀನರನ್ನು ನೆರೆಯಲು ಯಾವ ಶರಣೆಯೂ ಒಪ್ಪುವದಿಲ್ಲ. ರೇಚವ್ವೆ ಎಂಬ ಶರಣೆ—

ಬಂಜೆಯಾವಿಂಗೆ ಕ್ಷೀರವುಂಟೇ
ವ್ರತಹೀನನ ಬೆರೆಯಲುವುಂಟೇ
ನೀ ಬೆರೆದಡೂ ಬೆರೆ ; ನಾನೊಲ್ಲೆ ನಿಜಶಾಂತೇಶ್ವರ,

ಎನ್ನುತ್ತಾಳೆ. ಸ್ವತಃ ದೇವರು ಬೆರೆತರೂ, ತಾನು ಬೆರೆಯಲಾರದ ದೃಢ ನಿರ್ಧಾರ ಆಕೆಯದು. ಅಕ್ಕಮಹಾದೇವಿ "ಶೀಲ ಶೀಲ ವೆಂಬಿರಯ್ಯ" ಎನ್ನುವ ವಚನದಲ್ಲಿ ಬಹಿರಂಗ ಶೀಲಕ್ಕಿಂತ ಅಂತ-ರಂಗ ಶೀಲಕ್ಕೆ ಬೆಲೆ ಕೊಟ್ಟಿರುವುದನ್ನು ಕಾಣಬಹುದು.

ವೇಷಧಾರಿ ಡಾಂಭಿಕರು, ಜೈನ ಸನ್ಯಾಸಿಗಳು, ಶೈವ ವಿರಕ್ತರು ಮತ್ತು ಅಹಂಕಾರದ ಹಿರಿಯರನ್ನು ನೋಡಿ ಒರಟು ಭಾಷೆಯ-ಲ್ಲಿಯೇ ಅವರು ನಿಜವಾಗಿ ಯಾರು ಎನ್ನುವದನ್ನು ಹೀಗೆ ಹೇಳಿದ್ದಾಳೆ, "ಬತ್ತಲೆಯಿದ್ದವರು ಕತ್ತೆಯಮಕ್ಕಳು. ತಲೆ ಬೋಳಾದ-ವರೆಲ್ಲ ಮುಂಡೆಯ ಮಕ್ಕಳು. ತಲೆ ಜಡೆಗಟ್ಟಿದವರೆಲ್ಲ ಹೊಲೆಯರ ಸಂತಾನ." ಇಂತಹ ವಚನಗಳನ್ನು ಗಮನಿಸಿದಾಗ ಶಿವಶರಣೆಯರ

ಸಾತ್ವಿಕ ಸಂತಾಪವು ಒಂದೊಂದು ಸಲ ರೊಚ್ಚಾಗಿ ಬೈಗುಳಕ್ಕೊ ತಿರುಗಿ ಬಿಡುತ್ತದೊ ಎಂದೆನಿಸುತ್ತದೆ. "ಲಿಂಗ ಜಂಗಮದ ಪ್ರಸಾದಕ್ಕೆ ತಪ್ಪಿದಲ್ಲಿ ಕೊಲ್ಲಬಾರದೆ. ಕೊಂದಡೆ ಮುಕ್ತಿಯಿಲ್ಲ ವೆಂಬವರ ಬಾಯಲ್ಲಿ ಪಡಿಹಾರನ ಪಾದರಕ್ಷೆಯನಿಕ್ಕುವೆ." ಇದು ಕನ್ನಡಿ ಕಾಯಕದ ರೇಮಮ್ಮನ ಆಕ್ರೋಶ. ಅಕ್ಕಮ್ಮ, ಅಮುಗೆರಾಯಮ್ಮ, ಕನ್ನಡಿ ಕಾಯಕದ ರೇಮಮ್ಮ, ಸೂಳೆಸಂಕವ್ವೆ, ಕಾಳವ್ವೆ ಮೊದಲಾದ ಕೆಳವರ್ಗದ ವಚನಕಾರ್ತಿಯರ ವಚನಗಳನ್ನು ಗಮನಿಸಿದಾಗ ಅವರ ಧೈರ್ಯ, ರೊಚ್ಚು, ಸಮಾಜದ ಸಂಕೋಲೆ, ಕೃತ್ರಿಮತೆಗಳ ಬಗೆಗಿನ ಅವರ ನೋವು, ಆಕ್ರೋಶಗಳು ಕಂಡು ಬರುತ್ತವೆ. ಇಂಥಲ್ಲಿ ಶಿವಶರಣೆಯರ ಭಾಷೆ ಒರಟಾಗಿರಬಹುದು. ಆದರೆ ಮಾನವೀಯ ಭಾವನೆಗಳ ಪ್ರಮಾಣಿಕವಾದ ಮಿಡಿತ ಅಲ್ಲಿರುವುದು ಸ್ಪಷ್ಟವಾಗಿದೆ.

೪. **ಆತ್ಮಸ್ಥೈರ್ಯ :** ಶಿವಶರಣೆಯರಲ್ಲಿ ಕೆಲವರಾದರೂ ಏಕಾಕಿಗಳಾಗಿ ವೈರಾಗ್ಯದ ಜೀವನವನ್ನು ಬದುಕಿರುವವರಿದ್ದಾರೆ. ಅವರು ಗೃಹಿಣಿಯರಾಗಿರಲಿ, ಒಂಟಿಯಾಗಿರಲಿ ಅವರೆಲ್ಲ ಕಾಯಕ ನಿಷ್ಠರು. ಕಾಯಕನಿಷ್ಠೆಯಿಂದ ಬದುಕುವ ಭಕ್ತನಂಗಳ ಮಂಗಳ-ಮಯ ಕೈಲಾಸವೆಂಬ ಭಾವನೆ ಅವರದು. ಶರಣರು ತಾವು ಆಶ್ರಯಿಸುವ ಕಾಯಕದಲ್ಲಿ ಮೇಲು ಕೀಳನ್ನು ಎಣಿಸಿದವರಲ್ಲ. ಅಂತೆಯೇ ಅಸ್ಥಿಮಸಿ ಕೃಷಿ ವಾಣಿಜ್ಯ ಭಕ್ತರ ಪಡುಗ, ಪಾದ-ತ್ರಾಣ ಪಹರಿ ಬಾಗಿಲು, ಬೊಕ್ಕಸ, ಬಿಯಗ ಮುಂತಾದ ಕಾಯಕಗಳನ್ನು ಮಾಡಬೇಕೆಂಬ ಮುಕ್ತಸಲಹೆ ಅಕ್ಕಮ್ಮನೆಂಬ ಶರಣೆಯದು. ಇಂಥ ಕಾಯಕ ನಿಷ್ಠೆಯೇ ಅವರಲ್ಲಿ ಆತ್ಮಸ್ಥೈರ್ಯ

ಸ್ವಾಭಿಮಾನಗಳನ್ನು ತಂದಿದೆ. ಶರಣೆಯರಿಗೆ ತಾವು ಯಾರು ಎಂದು ಹೇಳಲು ಸಂಕೋಚವಿಲ್ಲ. ತಾನು ಕೊಟ್ಟಣದವಳಾಗಿರಲಿ, ಕನ್ನಡಿ ಕಾಯಕದವಳಿರಲಿ, ಸೂಳೆಯಾಗಿರಲಿ, ಕದಿರು ಕಾಯಕದವಳಿರಲಿ, ವಚನಗಳಲ್ಲಿ ತಮ್ಮ ತಮ್ಮ ಕಾಯಕ ಪದಗಳನ್ನು ನಿಸ್ಸಂಕೋಚವಾಗಿ ಹೇಳಿಕೊಂಡಿದ್ದಾರೆ.

ಕೊಟ್ಟಣದ ಸೋಮವ್ವೆ ; ಹದತಪ್ಪಿ ಕುಟ್ಟಲು ನುಚ್ಚಲ್ಲದೆ ಅಕ್ಕಿಯಿಲ್ಲ.

ಕನ್ನಡಿ ಕಾಯಕದ ರೇಮಮ್ಮ ; ಕೈಯಲ್ಲಿ ಕನ್ನಡಿಯಿರಲು ತನ್ನ ತಾ ನೋಡಬಾರದೆ ?

ಸೂಳೆ ಸಂಕವ್ವೆ : ಒತ್ತೆಯ ಹಿಡಿದು ಮತ್ತೊತ್ತೆಯ ಹಿಡಿಯೆ ಹಿಡಿದಡೆ ಬತ್ತಲೆ ನಿಲ್ಲಿಸಿ ಕೊಲುವರಯ್ಯ.

ಕದಿರು ಕಾಯಕದ ಕಾಳವ್ವೆ ; ಕದಿರು ಮುರಿಯೆ ಏನೂ ಇಲ್ಲ.

ಬಾಚಿ ಕಾಯಕದ ಕಾಳವ್ವೆ : ಕೈ ತಪ್ಪಿ ಕೆತ್ತಲು ಕಾಲಿಗೆ ಮೂಲ.

ಇವರೆಲ್ಲರಿಗೂ ಮುಕುಟವಿಟ್ಟಂತೆ ಹಡಪದ ಲಿಂಗಮ್ಮ "ಕನಿಷ್ಠದಲ್ಲಿ ಹುಟ್ಟಿದೆ; ಉತ್ತಮದಲ್ಲಿ ಬೆಳೆದೆ" ಎಂದು ತೃಪ್ತಿಯಿಂದ ಹುಟ್ಟಿನ ಬೆಳವಣಿಗೆಯ ಮೂಲವನ್ನು ಬಿಚ್ಚಿಟ್ಟಿದ್ದಾಳೆ. ತಾವು ಯಾವ ಮೂಲದವರು ಎಂದು ಹೇಳುವಲ್ಲಿ ದೊಡ್ಡಸ್ತಿಕೆ. ಬಯಸುವದು ಮಾನವೀಯ ಸ್ವಭಾವ. ಶರಣೆಯರು ಮಾತ್ರ ಇದ್ದುದನ್ನು ಇದ್ದ ಹಾಗೆ ಹೇಳಿ ತಮಗೂ ತಮ್ಮ ವೃತ್ತಿಗೂ ಒಂದು ಗೌರವದ ಸ್ಥಾನವನ್ನು ಕಲ್ಪಿಸಿಕೊಟ್ಟಿದ್ದಾರೆ. ಆರ್ಥಿಕ ಸ್ವಾತಂತ್ರ್ಯ ಹೆಣ್ಣಿಗೆ ಬೆನ್ನೆಲುಬು ಎಂಬುದು ಈಗಿನವರ ತಿಳುವಳಿಕೆ, ಎಂಟುನೂರು ವರ್ಷಗಳ

ಹಿಂದೆ ಶರಣೆಯರು ಕಾಯಕವನ್ನು ನೆಚ್ಚಿ ಆರ್ಥಿಕವಾಗಿಯೂ ಸಬಲರಾಗಿ ಆತ್ಮಸ್ಥೈರ್ಯವನ್ನು ಮೆರೆದಿದ್ದಾರೆ. ಕಾಯಕ-ವನ್ನು ಇಹ-ಪರ ಸಾಧನವನ್ನಾಗಿ ಮಾಡಿಕೊಂಡಿದ್ದಾರೆ.

ಶಿವಶರಣ-ಶರಣೆಯರಿಗೆ ಅವರದೇ ಆದ ನೇಮ ಭಾಷೆ-ಗಳಿವೆ. ಅವು ಯಾವುವೆಂದರೆ—

ಅರ್ಚನೆ ಪೂಜನೆ ನೇಮವಲ್ಲ
ಮಂತ್ರ ತಂತ್ರ ನೇಮವಲ್ಲ
ಧೂಪ ದೀಪಾರತಿ ನೇಮವಲ್ಲ
ಪರಧನ ಪರಸ್ತ್ರೀ ಪರದೈವಂಗಳಿಗೆವಿಗದಿಪ್ಪುದೆ ನೇಮ.
ಲಂಚವಂಚನಕ್ಕೆ ಕೈಯಾನದ ಭಾಷೆ

(ಸತ್ಯಕ್ಕ)

ಈ ರೀತಿ ಶಿವಶರಣೆಯರು ಅಂತರಂಗ ವ್ರತಸ್ಥರಾಗಿ ಆತ್ಮಸ್ಥೈರ್ಯದಿಂದ ಬಾಳಿ ನಿಜದ ಬಟ್ಟೆಯಲ್ಲಿಯೆ ಸಾಗಿ ವ್ಯಷ್ಟಿ-ಸಮಷ್ಟಿಗಳೆರಡರ ಕಲ್ಯಾಣದ ಮಾರ್ಗವನ್ನು ತೋರಿಸಿದ್ದಾರೆ. ಅಂದಿನ ಸಮಾಜದ ಮೂಲ ಘಟಕವಾದ ವ್ಯಕ್ತಿಯ ಓರೆ-ಕೊರೆ-ಗಳನ್ನು ನೇರಗೊಳಿಸಿ ಸಮಾಜದ ಮುಖ ಕಳೆಗಟ್ಟುವಂತೆ ಮಾಡಿ-ದ್ದಾರೆ. ತಾವು ಬದುಕಿದ ಸಮಾಜ ವಲಯವನ್ನು ಸ್ವರ್ಗದ ವಲಯವನ್ನಾಗಿ ಪರಿವರ್ತಿಸಿದ್ದಾರೆ ಎನ್ನಬಹುದು. ಮನುಷ್ಯ ಮನುಷ್ಯನಾಗಿಯೇ ಬದುಕಬೇಕು. ಹಾಗೆ ಬದುಕುವಾಗ ಬರುವ ಅಡ್ಡಿಗಳನ್ನು ಎದುರಿಸಿ, ಆತ್ಮಸ್ಥೈರ್ಯದಿಂದಿರಬೇಕು ಎಂಬುದೇ ಶರಣೆಯರ ಸಾಮಾಜಿಕ ಸಂದೇಶವಾಗಿದೆ.

೫. ಸಾಹಿತ್ಯಿಕ ಮುಖ

ಶರಣೆಯರ ವಚನಗಳು ಧಾರ್ಮಿಕ ಸಮಾಜಿಕ ಚಳವಳಿಯ ಫಲಗಳು. ಸಮಾಜದ ಧಾರ್ಮಿಕ ಸಾಮಾಜಿಕ ಜೀವನದ ವೈಪರಿತ್ಯಗಳು ಅಲ್ಲಿ ಉಕ್ತವಾಗಿರುವಂತೆ; ವ್ಯಷ್ಟಿ-ಸಮಷ್ಟಿಗಳೆರಡರ ಕಲ್ಯಾಣ ಮಾರ್ಗವು ವ್ಯಕ್ತವಾಗಿದೆ. ಶರಣೆಯರ ವಚನಗಳಿಗಿರುವ ಇತರ ಆಯಾಮಗಳನ್ನು ಬಿಡಿಸಿ ನೋಡಬೇಕಾಗಿರುವದು ಇಂದಿನ ಅಗತ್ಯಗಳಲ್ಲಿ ಒಂದು. ಈ ದೃಷ್ಟಿಯಿಂದ ವಚನಗಳಲ್ಲಿ ಹುದುಗಿರುವ ಸಾಹಿತ್ಯಿಕ ಸಂದೇಶದ ಪರಿಚಯ ಮಾಡಿಕೊಳ್ಳಬಹುದು.

ಶರಣೆಯರ ವಚನಗಳಲ್ಲಿರುವ ಕಲಾತ್ಮಕ ಗುಣ-ಕವಿಭಾವ ಅವುಗಳ ಮೆರುಗನ್ನು ಹೆಚ್ಚಿಸಿ ಜೀವನ ಪ್ರೇಮವನ್ನು ಹಸಿರಾಗಿರಿಸಿದೆ. ಪರದ ಸಿದ್ಧಿಗೆ ಇಹದ ಬದುಕು ಸಾಧನ. ಈ ಲೋಕದಲ್ಲಿ ಚೆನ್ನಾಗಿರಬೇಕೆಂಬ ಛಲ-ಬಲ-ಜೀವನೋತ್ಸಾಹಗಳೇ ವಚನಗಳ ಆಶಯ. ಇದು ಯುಗಾಂತರಗಳಲ್ಲಿಯೂ ಮಾನವರಿಗೆ ಸಜ್ಜನಿಕೆಯ ಬದುಕನ್ನು ಬದುಕಲು ಪ್ರೇರಣೆ ನೀಡುವಂತಹದು.

ಶರಣೆಯರು ನೆಲದ ಬದುಕಿನಿಂದ ದೂರಸರಿಯಲು ಬಯಸುವದಿಲ್ಲ, ತಮ್ಮ ಕಾಲುಗಳನ್ನು ನೆಲದ ಮೇಲಿರಿಸಿ, ಮನಸ್ಸನ್ನು ಊರ್ಧ್ವಮುಖಿಯಾಗಿಸುವ ಯತ್ನ ಅವರದು. ಅಂತೆಯೇ

ಲೋಕದ ಜಂಜಾಟವನ್ನು ವಿರೋಧವನ್ನು ಎದುರಿಸಿ ತಮ್ಮ ಗುರಿ ಸಾಧಿಸುವ ಛಲ ಅವರಿಗಿದೆ. ಅಕ್ಕ, ತನ್ನ ಪ್ರಖ್ಯಾತವಾದ ವಚನದಲ್ಲಿ:

ಬೆಟ್ಟದ ಮೇಲೊಂದು ಮನೆಯ ಮಾಡಿ
ಮೃಗಗಳಿಗಂಜಿದಡೆಂತಯ್ಯಾ?
ಸಮುದ್ರದ ತಡಿಯಲೊಂದು ಮನೆಯ ಮಾಡಿ
ನೊರೆ ತೆರೆಗಳಿಗಂಜಿದಡೆಂತಯ್ಯಾ?

ಎಂದು ಕೇಳುತ್ತ, ಲೋಕದಲ್ಲಿ ಹುಟ್ಟಿದ ಬಳಿಕ ಸ್ತುತಿ ನಿಂದೆಗಳು ಬಂದರೆ ಸಮಾಧಾನಿಯಾಗಿದ್ದುಕೊಂಡೇ ನಮ್ಮ ಗುರಿ ತಲುಪಬೇಕು ಎಂದು ತಹಿ ನುಡಿಯುತ್ತಾಳೆ. ಉಪದೇಶದ ಭಾರದಿಂದ ಕಾವ್ಯಭಾವ ಮಸುಕಾಗಬೇಕಿಲ್ಲವೆಂಬುದಕ್ಕೆ ಈ ವಚನ ಉತ್ತಮ ನಿದರ್ಶನವೆನ್ನ ಬಹುದು. ಶರಣೆಯರಲ್ಲಿ ಮಧುರ ಭಕ್ತಿಯ ಅಭಿವ್ಯಕ್ತಿ ಸೊಗಸಾಗಿ ಮೂಡಿನಿಂತಿದೆ. ಒಂದು ಸದುದ್ದೇಶದ ಸಾಧನೆಗಾಗಿ ನಿರಂತರ ಪರಿಶ್ರಮ, ಸದಾ ಎಚ್ಚರ ಅದೆಷ್ಟು ಆವಶ್ಯಕವೆಂಬುದನ್ನು ನಾವಿಲ್ಲಿ ತಿಳಿಯಬಹುದು. ಅಕ್ಕ ಚನ್ನಮಲ್ಲಿಕಾರ್ಜುನನಿಗಾಗಿ ಪರಿತಪಿಸುತ್ತ, "ಅಳಿಸಂಕುಲವೇ, ಮಾಮರವೇ, ಬೆಳುದಿಂಗಳೆ, ಕೋಗಿಲೆಯೆ" ಎಂದು ಸಚಾರಾಚರ ಸೃಷ್ಟಿಯನ್ನು ಪ್ರಶ್ನಿಸುವಲ್ಲಿ ಭಾವಗೀತೆಯ ಸತ್ವ ಇರುವದು ಗೋಚರವಾಗುತ್ತದೆ. ಇದುವರೆಗೆ ಸ್ತ್ರೀಯ ವಿರಹವನ್ನು ಕವಿಗಳೇ ಕಲ್ಪಿಸಿಕೊಂಡು ಬಣ್ಣಿಸಿದ್ದುಂಟು. ವಚನ-ಕಾರರಲ್ಲಿಯೂ ಬಸವಣ್ಣ ಮುಂತಾದ ಹಲವಾರು ಶರಣರು ಶರಣಸತಿಭಾವ ತಂದುಕೊಂಡು ನಿವೇದಿಸಿರುವದುಂಟು. ಮಹಾದೇವಿಯಕ್ಕನಲ್ಲಿ ಈ ನವ್ಯವಾದ ಭಾವನೆಗಳ ಆತ್ಮಾಭಿವ್ಯಕ್ತಿ ಯಿದೆ. ಸತ್ಯಕ್ಕ ಲಿಂಗಪತಿಯನ್ನು ಕುರಿತು,

ಪೊರಗಿದ್ದಹನೆಂದು ನಾನು ಮರೆದು ಮಾತನಾಡಿದೆ.
ಅರಿಯಲೀಯದೆ ಬಂದೆನ್ನ ಅಂತರಂಗದಲ್ಲಿಪ್ಪನು

ಎಂದು ನಿಬ್ಬೆರಗಿನ ನುಡಿಯನ್ನಾಡುತ್ತಾಳೆ. ಭ್ರಮೆಯಳಿದು ಭಾವತುಂಬಿ ನಿಂತ ನಿಲುವು ಹೇಗೆ ಈ ಶಬ್ದಗಳಲ್ಲಿ ಮೋಳವಿಸಿದೆ ಯೆಂಬುದನ್ನು ಕಾಣಬಹುದು. ಶರಣೆಯರ ವಚನಗಳ ಒಂದು ಮುಗ್ಗುಲು ಅನುಭಾವವಾದರೆ ಮತ್ತೊಂದು ಕಾವ್ಯಗುಣವೆಂಬು- ದನ್ನು ಇಲ್ಲಿ ಗುರುತಿಸಬಹುದು.

ಅನೇಕ ಶಿವಶರಣೆಯರು ವಚನ ರಚನೆಯಲ್ಲಿ ತೊಡಗಿ ಕಾವ್ಯಗುಣಗಳನ್ನೊಳಗೊಂಡ ವಚನಗಳನ್ನು ರಚಿಸಿರುವರಾದರೂ, ಅಂದಿನ ದಿನಗಳಲ್ಲಿ ಮಹಿಳೆಯರ ವಿದ್ಯಾಭ್ಯಾಸಕ್ಕೆ ಹೆಚ್ಚಿನ ಅವಕಾಶ ವಿರಲಿಲ್ಲವೆಂದೇ ಹೇಳಬೇಕಾಗುತ್ತದೆ. ಹೀಗಾಗಿ ಬಹಳಷ್ಟು ಶರಣೆ- ಯರು ಹೆಚ್ಚಿನ ವಿದ್ಯಾಭ್ಯಾಸ ಮಾಡಿದವರಲ್ಲ. ಕೆಳಸ್ತರದಿಂದ ಬಂದ ವಚನಕಾರ್ತಿಯರು ಮೊದಲು ಅನಕ್ಷರಸ್ಥರಾಗಿರಬಹುದು. ಶರಣರ ಪ್ರಭಾವಲಯದಲ್ಲಿ ಬಂದನಂತರ ಅಕ್ಷರಸ್ಥರಾಗಿ ವಚನ- ರಚನೆ ಮಾಡಿರುವ ಸಾಧ್ಯತೆಯಿದೆ. ಉರಿಲಿಂಗಪೆದ್ದಿಗಳ ಹೆಂಡತಿ ಕಾಳವ್ವೆ ಮಹಾದೇವಿಯಕ್ಕ ಮೊದಲಾದವರ ವಚನಗಳಲ್ಲಿ ಬಳಕೆ- ಯಾಗಿರುವ ಸಂಸ್ಕೃತ ಉಲ್ಲೇಖಗಳನ್ನು ಗಮನಿಸಿದರೆ ವಚನಕಾರ್ತಿ- ಯರಲ್ಲಿ ಕೆಲವರು ಸಂಸ್ಕೃತಾಭ್ಯಾಸವನ್ನು ಮಾಡಿರುವದು ಕಂಡು ಬರುತ್ತದೆ. ಶರಣೆಯರಲ್ಲಿ ಯಾರು ಪಾಂಡಿತ್ಯಪ್ರಿಯರಲ್ಲ. ಬೆಡಗಿನ ವಚನಗಳನ್ನು ಹೊರತುಪಡಿಸಿ, ತಾವು ಹೇಳುವುದು ಸಾಮಾನ್ಯರಿಗೆ ತಿಳಿಯಲೆಂಬ ಉದ್ದೇಶದಿಂದಲೇ ತಮ್ಮ ಅನುಭವ-

ಗಳನ್ನು ಸರಳ ಸುಂದರ ಭಾಷೆಯಲ್ಲಿ ವಿವರಿಸಿದವರಾಗಿದ್ದಾರೆ. ಹಾಗೆ ನೋಡಿದರೆ ಸಮಗ್ರ ವಚನ ಸಾಹಿತ್ಯವೇ ಮಾರ್ಗಶೈಲಿ-ದೇಸೀ ಶೈಲಿ, ಗದ್ಯ-ಪದ್ಯಗಳ ನಡುವಿನ ಸುವರ್ಣಮಾಧ್ಯಮದಲ್ಲಿ ಪ್ರವಹಿಸಿದ ಸಾಹಿತ್ಯ ಪ್ರಕಾರವಾಗಿದೆ.

ಅಕ್ಕಮಹಾದೇವಿಯ ವಚನಗಳಲ್ಲಿ ಬರುವ ಉಪಮೆ-ದೃಷ್ಟಾಂತಗಳು ನಿತ್ಯಜೀವನದಿಂದಲೇ ಎತ್ತಿಕೊಂಡವುಗಳಾಗಿವೆ. "ಕೋಲ ತುದಿಯ ಕೋಡಗನಂತೆ, ನೇಣ ತುದಿಯ ಬೊಂಬೆಯಂತೆ ಆಡಿದೆನಯ್ಯ ನೀನಾಡಿಸಿದಂತೆ.," "ಲೋಕದ ಚೇಷ್ಟೆಗೆ ರವಿ ಬೀಜವಾದಂತೆ, ಕರಣಂಗಳ ಚೇಷ್ಟೆಗೆ ಮನವೇ ಬೀಜ" ಎಂಬ ಉಪಮೆಗಳಾಗಲಿ, 'ಹಡಪದ ಲಿಂಗಮ್ಮ ಘನವ ಕಾಣುವದಕ್ಕೆ ಮನವನ್ನು ಕುರಿತು ಅದು ಹೇಗಿರಬೇಕೆಂದರೆ— "ಬೆಳಗಿದ ದರ್ಪಣದಂತಿರಬೇಕು" "ಅಕ್ಕಿಯ ಥಳಿಸಿದಂತೆ, ಅಲ್ಲ ಸುಲಿದಂತೆ ಕನ್ನಡಿಯ ನೋಡಿದಂತೆ" ಮನ ನಿರ್ಮಲವಾಗಿರಬೇಕು ಎನ್ನು-ತ್ತಾಳೆ. ಮನಸ್ಸಿನ ನಿರ್ಮಲತೆಗೆ ಬೆಳಗಿದ ದರ್ಪಣ, ಅಕ್ಕಿ, ಅಲ್ಲಗಳ ಉಪಮೆ ನೀಡಿದ್ದಾಳೆ. ಇವು ಹೆಣ್ಣುಮಕ್ಕಳ ಸುತ್ತಲೂ ಇರುವ ವಸ್ತುಗಳೇ. ಅಂದು ಬಳಕೆಯಲ್ಲಿದ್ದ ಕಂಚಿನ ಕನ್ನಡಿಗಳು ಬೆಳಗಿದಾಗಲೇ ಪ್ರತಿಫಲಿಸುವಂಥವುಗಳು. ಭತ್ತ ಥಳಿಸಿದಾಗ ಅಕ್ಕಿ, ಅಲ್ಲ ಸುಲಿದಾಗ ಸ್ವಚ್ಛ. ಹೀಗೆ ತಾವು ಕಂಡ ಅಕ್ಕಿ, ಅಲ್ಲಗಳಂತಹ ಅಡಿಗೆಮನೆಯ ಸಾಮಾನುಗಳು ಆಧ್ಯಾತ್ಮದ ಅನುಭವ ಹೇಳಲು ಸಹಕಾರಿ ಉಪಮೆಗಳಾಗಿ ಪರಿಣಮಿಸಿವೆ. ಉರಿಲಿಂಗಪೆದ್ದಿಗಳ ಪತ್ನಿ ಕಾಳವ್ವೆ ಗಂಧ-ತೇಗಿನ ಕಟ್ಟಿಗೆಯನ್ನಷ್ಟೆ ಕಂಡಿದ್ದ ಸಾಹಿತ್ಯಕ್ಕೆ 'ತೂಬರು' ಕಟ್ಟಿಗೆಯನ್ನೂ ತಂದಿದ್ದಾಳೆ. ಭಕ್ತನಾದವನು ಶಾಂತ-

ಮನಸ್ಥಿತಿಯುವಸಿರಬೇಕೆಂಬುದನ್ನು ಹೇಳುತ್ತ, "ತೂಬರದ ಕೊಳ್ಳಿಯಂತೆ ಉರಿವಾತ ಭಕ್ತನೆ?" ಎಂದು ಪ್ರಶ್ನಿಸುತ್ತಾಳೆ. ಬಹುಶಃ ಶರಣೆಯರು ವಚನ ರಚನೆ ಮಾಡಿರುವದರಿಂದಲೇ ಇಂತಹ ಸಂಗತಿಗಳು ಸಾಹಿತ್ಯ ಲೋಕದಲ್ಲಿ ಪ್ರವೇಶಿಸುವಂತಾದವು. "ಫಲವಾದ ಮರನ ಕಲ್ಲಲಿ ಇಡುವರೊಂದು ಕೋಟಿ. ಎಲವದ ಮರನ ಇಡುವರೊಬ್ಬರ ಕಾಣೆ" ಎಂಬುದು ಮಹಾದೇವಿಯಕ್ಕನು ಲೋಕದ ತೊಂದರೆಗೆ ಗುರಿಯಾದ ಮನಸ್ಸನ್ನು ಸಾಂತ್ವನಗೊಳಿಸುತ್ತ ಹೇಳಿದ ದೃಷ್ಟಾಂತ.

"ತನು ಕರಗದವರಲ್ಲಿ ಮಜ್ಜನವನೊಲ್ಲೆಯಯ್ಯಾ ನೀನು
ಮನ ಕರಗದವರಲ್ಲಿ ಪುಷ್ಪವನೊಲ್ಲೆಯಯ್ಯಾ ನೀನು"
"ಹಸಿವೆಯೆ ನೀನು ನಿಲ್ಲು ನಿಲ್ಲು
ತೃಷೆಯೆ ನೀನು ನಿಲ್ಲು ನಿಲ್ಲು"

ಈ ವಚನಗಳಲ್ಲಿರುವ ಅನುಪ್ರಾಸ ಲಯಬದ್ಧತೆ, ಗೇಯಗುಣಗಳು ವಚನದ ಕಾವ್ಯಗುಣವನ್ನು ಹೆಚ್ಚಿಸಿವೆ. ಭಾವಗೀತೆಯ ಸತ್ತ್ವದಿಂದ ಸುಪುಷ್ಟವಾಗಿವೆ. "ಊರ್ವಸಿ ಕರ್ಪುರವ ತಿಂದು ಎಲ್ಲರಿಗೆ ಮುತ್ತಕೊಟ್ಟಡೆ ಮೆಚ್ಚುವರಲ್ಲದೆ ಹಂದಿ ಕರ್ಪುರವ ತಿಂದು ಎಲ್ಲರಿಗೆ ಮುತ್ತ ಕೊಟ್ಟಡೆ ಮೆಚ್ಚುವರೆ, ಹುಡು ಹುಡು ಎಂದಟ್ಟುವರಲ್ಲದೆ?" ಎಂಬ ಮೋಳಿಗೆ ಮಹಾದೇವಮ್ಮನ ನುಡಿಯಲ್ಲಿ ಲೋಕಾನುಭವ–ಆಡುನುಡಿಗಳೆರಡನ್ನು ಕಾಣಬಹುದು. ಓದಿದ ನಂತರ ಬಹುಕಾಲ ನೆನಪಿನಲ್ಲಿ ಉಳಿಯುವ ಹಲವು ಸಾರೋಕ್ತಿ, ಸಾದೃಶ್ಯಗಳೂ ಅಲ್ಲಿವೆ.

‘ ಉಸುರಿನ ಪರಿಮಳವಿರಲು ಕುಸುಮದ
ಹಂಗೇಕಯ್ಯ ”

‘ ಆಗಸ ನೀರೊಳಗಿರ್ದು ಬಾಯಾರಿ ಸತ್ತಂತೆ
ತಮ್ಮೊಳಗಿರ್ದ ಮಹಾ ಘನವನರಿಯರು
’ ನಿಮ್ಮ ಶರಣರ ನಿಲವ ನೀವೆ ಬಲ್ಲಿರಲ್ಲದೆ ಈ
ಕೋಣನ ಮೈಮೇಲಣ ಸೊಳ್ಳೆಗಳೆತ್ತ ಬಲ್ಲವಯ್ಯ ’
(ಮಹಾದೇವಿಯಕ್ಕ)

ಅನಿತ್ಯವ ಹೊತ್ತುಕೊಂಡು ತಿರುಗುವ ಅಘೋರಿಗಳ
ಕಂಡಡೆ ಮೂಗಿಯು ಕೋಗಿಲೆಯಂತೆ ಮೋರೆಯ
ತೋರೆನು
(ಅಮುಗೆರಾಯಮ್ಮ)

ಹೀಗೆ ಶರಣೆಯರ ವಚನಗಳಲ್ಲಿ ಅಲಂಕಾರದ ವೈಭವ, ದೇಸಿಯ ಸೊಗಸು, ಮನಸೂರೆಗೊಳ್ಳುವ ಅಂತಃಸ್ಫುರಣದಿಂದಾದ ಭಾವ-ತೀವ್ರತೆ ಅರಸಿದಲ್ಲೆಲ್ಲ ದೊರೆತು ಕಾವ್ಯಾನುಭವದ ಮುದವನ್ನು ನೀಡುತ್ತವೆ.

ಅಕ್ಕನ ಯೋಗಾಂಗ ತ್ರಿವಿಧಿ ಹೆಸರೇ ಸೂಚಿಸುವಂತೆ ತ್ರಿಪದಿಯಲ್ಲಿ ರಚಿತವಾಗಿದೆ. ೬೭ ಪದ್ಯಗಳಲ್ಲಿ ಅಕ್ಕನ ಅನುಭಾವ ಸಂಪತ್ತು ಸಾಹಿತ್ಯರೂಪ ಪಡೆದಿದೆ. ಅದರಲ್ಲಿಯ ಒಂದು ಪದ್ಯ ಕೆಳಗಿನಂತಿದೆ.

> ಕೋಟಿ ರವಿ ಶಶಿಗಳಿಗೆ ಮೀಟಿದ ಪ್ರಭೆ ಬಂದು
> ನಾಟಿತ್ತು ಎನ್ನ ಕರದೊಳಗೆ। ಅದರಿಂದ
> ದಾಟಿದೆನು ಭವದ ಕುಳಗಳ

ಅರುಹಿನ ಕುರುಹಾದ ಕರಸ್ಥಲದ ಇಷ್ಟಲಿಂಗವನ್ನು 'ಕೋಟಿ ರವಿ ಶಶಿಗಳಿಗೆ ಮೀಟಿದ ಪ್ರಭೆ' ಎಂಬುದಾಗಿ ವರ್ಣಿಸಿದ ರೀತಿ ಓದುತ್ತಿದ್ದಂತೆಯೇ ನಿಬ್ಬೆರಗನ್ನುಂಟು ಮಾಡುತ್ತದೆ. ಇಂತಹ ಅಪೂರ್ವ ಸಾಧನದಿಂದ ತಾನು ಭವವನ್ನು ದಾಟಿದ ಬಗೆಯನ್ನು ಬಣ್ಣಿಸಿದ್ದಾಳೆ.

ಹೀಗೆ ಶಿವಶರಣೆಯರ ವಚನಗಳು ಭಾವ ಬಂಧುರವಾಗಿ, ಅನುಭವದ ಖಣಿಯಾಗಿ ಮೈದಾಳಿ ನಿಲ್ಲುತ್ತವೆ. ಕಾವ್ಯಸೊಬಗನ್ನು ಸೂಸಿ ಮನ ಸೆಳೆಯುತ್ತವೆ.

ಇನ್ನೊಂದು ಲಕ್ಷಿಸಬೇಕಾದ ಸಂಗತಿಯೆಂದರೆ ಸಾಮಾನ್ಯರ ಭಾಷೆ, ದಿನನಿತ್ಯದ ಆಡುಭಾಷೆ, ಉಪಮೆ-ದೃಷ್ಟಾಂತಗಳು ಶಿವ-ಶರಣರಿಂದ ಆಗಲೇ ಸಾಹಿತ್ಯವಲಯದಲ್ಲಿ ಪ್ರವೇಶ ಪಡೆದಿದ್ದವು. ಶರಣೆಯರ ರಚನೆಗಳಲ್ಲಿ ಮನೆ ವಸ್ತು ಒಡವೆಗಳು ಕೆಲಸ-ಕಾರ್ಯ-ಗಳು ಬಳಕೆಗೊಂಡವು. ಈ ಮೂಲಕ ಮನೆ ಬಾಗಿಲಿಗೆ ಬಂದ ಸಾಹಿತ್ಯ ಮನೆಯೊಳಕ್ಕೂ ಪ್ರವೇಶ ಪಡೆಯಿತು. ಸ್ತ್ರೀ ಲೋಕದ ಅನುಭವಗಳನ್ನು ಪುರುಷ ಭಾವಿಸಿಕೊಂಡು ಚಿತ್ರಿಸಬಲ್ಲನಾದರೂ, ಪತಿ, ಪರಿವಾರ ಹಾಗೂ ಸಮಾಜದೊಡನೆ ತೀರ ವಿಶಿಷ್ಟವಾದ ಸಂಬಂಧಗಳನ್ನು ಹೊಂದಿರಬೇಕಾದ ಸ್ತ್ರೀಯು ಮಾತ್ರ ಇಂಥ ಸಂಕೀರ್ಣ ಅನುಭವಗಳನ್ನು ಚಿತ್ರಿಸಬಲ್ಲಳು ಎಂಬುದನ್ನು ತಮ್ಮ

ರಚನೆಗಳ ಮೂಲಕ ತೋರಿಸಿಕೊಟ್ಟುದಾಗಿದೆ. ಒಟ್ಟಿನಲ್ಲಿ ಹೇಳು-ವುದಾದರೆ ಶರಣೆಯರ ವಚನಗಳು ಸ್ತ್ರೀಯರು ಸ್ವತಃ ತಮ್ಮ ಜೀವನವನ್ನು ರೂಪಿಸಿಕೊಳ್ಳುವಲ್ಲಿ, ಸಮಾಜವನ್ನು ಎದುರಿಸುವಲ್ಲಿ, ಅನ್ಯಾಯವನ್ನು ಪ್ರತಿಭಟಿಸುವಲ್ಲಿ, ಲೋಕ ಕಲ್ಯಾಣವನ್ನು ಬಯಸುವಲ್ಲಿ, ಸ್ತ್ರೀಲೋಕಕ್ಕೆ ಶಾಶ್ವತ ಸಂದೇಶವನ್ನು ನೀಡುವವು-ಗಳಾಗಿವೆ. ಅವು ಸತ್ತ್ವದಲ್ಲಿಯೂ ಅಭಿವ್ಯಕ್ತಿಯಲ್ಲಿಯೂ ಅಪ್ಪಟ-ವಾದ ಚಿನ್ನ, ರಸಘಟ್ಟಿ, ಇದನ್ನು ಚನ್ನಬಸವಣ್ಣನವರ ಒಂದು ವಚನದಿಂದ ಮನಗಾಣಹುದು—

ಆದ್ಯರ ಅರವತ್ತು ವಚನಕ್ಕೆ ದಣ್ಣಾಯಕರ
ಇಪ್ಪತ್ತು ವಚನ.
ದಣ್ಣಾಯಕರ ಇಪ್ಪತ್ತು ವಚನಕ್ಕೆ ಪ್ರಭುದೇವರ
ಹತ್ತು ವಚನ.
ಪ್ರಭುದೇವರ ಹತ್ತುವಚನಕ್ಕೆ ಅಜಗಣ್ಣನ
ಐದು ವಚನ.
ಅಜಗಣ್ಣನ ಐದು ವಚನಕ್ಕೆ ಕೂಡಲ ಚನ್ನ
ಸಂಗಯ್ಯನಲ್ಲಿ
ಮಹಾದೇವಿಯಕ್ಕಗಳ ಒಂದು ವಚನ ನಿರ್ವಚನ
ಕಾಣಾ.

ಇದು ಮಹಾದೇಯಕ್ಕನ ವಚನಗಳನ್ನು ಮಾತ್ರ ಕುರಿತಾದ ಪ್ರಶಂಸೆಯಾಗಿದ್ದರೂ, ಗಾತ್ರಗುಣಗಳಿಂದ ಹಿರಿದಾಗಿರುವ ಎಲ್ಲ ಶರಣೆಯರ ವಚನಗಳಿಗೂ ಅನ್ವಯಿಸಬಹುದಾಗಿದೆ. ಆರಂಭ-ದಲ್ಲಿಯೇ ವ್ಯಕ್ತಪಡಿಸಿರುವಂತೆ ಶರಣೆಯರ ಇಡೀ ಬದುಕು ಒಂದು

ಸಂದೇಶವಾಗುತ್ತದೆ. ಆದರೂ ಅವರ ಸಾಹಿತ್ಯ ಪರಿಶೀಲನೆಯಿಂದ ಈ ಕೆಳಗಿನ ಸಂದೇಶ ಗುರುತಿಸಿಕೊಳ್ಳಬಹುದಾಗಿದೆ. ೧೨ನೆಯ ಶತಮಾನದವರೆಗೂ ಪುರುಷಧ್ವನಿಯೇ ಸಾಹಿತ್ಯನಂದನದಲ್ಲಿ ಕೇಳಿ ಬರುತ್ತಿದ್ದ ಧ್ವನಿಯಾಗಿತ್ತು. ಅಂದು ಶಿವಶರಣೆಯರು ಆ ನಂದನ-ದಲ್ಲಿ ಪ್ರವೇಶ ಪಡೆದರು. ಸ್ತ್ರೀಯೂ ತನ್ನದೇ ಆದ ಸೊಲ್ಲ-ನ್ನಿತ್ತಳು ಸ್ವತಂತ್ರಳು, ಸಮರ್ಥಳು ಎಂಬುದನ್ನು ತೋರಿಸಿ-ಕೊಟ್ಟರು. ಸ್ತ್ರೀಯು ಕೂಡ ತನ್ನ ಭಾವನೆಗಳನ್ನು ಅನುರೂಪ-ವಾದ ಭಾಷೆಯಿಂದ ಪಡಿಮೂಡಿಸಬಲ್ಲಳಾಗಿದ್ದಾಳೆ. ಆಕೆ ಕೇವಲ ಅನುಭವದ ಮೌನ ಕೊಳವಲ್ಲ, ಭೋರ್ಗರೆವ ಅಭಿವ್ಯಕ್ತಿಯ ಸಾಗರವೂ ಆಗಬಲ್ಲಳು ಎಂಬುದೊಂದು ಶರಣೆಯರ ವಚನಗಳ ನಿತ್ಯ ಸಂದೇಶವಾಗುತ್ತದೆ. ಅದರಂತೆ ಪತಿ-ಪರಿವಾರ, ಸುತ್ತಲಿನ ಸಮಾಜಗಳ ಏನನ್ನೂ ಮಾಡಿಯೂ ದಕ್ಕಿಸಿಕೊಳ್ಳಬಲ್ಲವು ಎಂಬುದನ್ನು ಹುಸಿಗೊಳಿಸಿ ವ್ಯಕ್ತಿಗತ ಸಾಮಾಜಿಕ ಅನ್ಯಾಯಗಳನ್ನು ಯಾವ ಕಾಲಕ್ಕೂ ಸಹಿಸಿಕೊಳ್ಳಬೇಕಾಗಿಲ್ಲ. ಅದನ್ನು ಪ್ರತಿಭಟಿಸಬೇಕಾ-ದುದು ಪುರುಷಧರ್ಮವಷ್ಟೆ ಅಲ್ಲ ಎಂಬ ಸಂದೇಶವನ್ನು ಶರಣೆಯರ ವಚನಗಳು ಸಾರುತ್ತವೆ ಎನ್ನಬಹುದು.

ಉಪಸಂಹಾರ

ಶಿವಶರಣೆಯರು ೧೨ನೆಯ ಶತಮಾನದ ಬಸವಣ್ಣನವರ ಕ್ರಾಂತಿಗೆ ಒಂದು ದೃಷ್ಟಿಯಿಂದ ಕೇಂದ್ರಶಕ್ತಿಯಾಗಿ ನಿಂತಿದ್ದಾರೆನ್ನಬಹುದು. ಬಸವಣ್ಣನವರ ಅಕ್ಕ ಅಕ್ಕನಾಗಮ್ಮ, ಬಸವಣ್ಣ ಬಾಲ್ಯದಲ್ಲಿ ಮನೆ ತ್ಯಜಿಸುವದರಿಂದ ಮೊದಲುಗೊಂಡು, ಮುಂದೆ ಉಳಿವೆಯಲ್ಲಿ ಶರಣರು ಐಕ್ಯವಾಗುವವರೆಗೂ ಶರಣರಿಗೆ ಬೆಂಗಾವಲಾಗಿ ನಿಂತು, ಶರಣ ಧರ್ಮದ ಯೋಗಕ್ಷೇಮವನ್ನು ನೋಡಿಕೊಂಡಿರುವಳು. ಈ ಕಾಲದಲ್ಲಿ ಅನುಭವಮಂಟಪದ ಒಳಗೂ-ಹೊರಗೂ ಶಿವಾನುಭವ ಸಂಪನ್ನೆಯರು ಕಾಣಿಸಿಕೊಂಡು ಆಧ್ಯಾತ್ಮಿಕ, ಸಾಮಾಜಿಕ, ಸಾಹಿತ್ಯಿಕ ಕ್ಷೇತ್ರಗಳನ್ನು ಬೆಳಗಿದರು. ಮಹಾದೇವಿಯಕ್ಕ, ಮುಕ್ತಾಯಕ್ಕ, ಸತ್ಯಕ್ಕ, ಕೊಟ್ಟಣದ ಸೋಮವ್ವೆ, ಅಕ್ಕಮ್ಮ, ಅಮುಗೆರಾಯಮ್ಮ ಇಂತಹ ಶಿವಶರಣೆಯರು ನಾಡಿನ ತುಂಬ ಕಾಣಿಸಿಕೊಂಡರು. ಸಮಾಜದಲ್ಲಿದ್ದ ಅಂಧಾನುಕರಣೆಯ ಶೃಂಖಲೆಗಳನ್ನು ಕತ್ತರಿಸಿ ಅದಕ್ಕೊಂದು ನಿತ್ಯ ನೂತನ ಸ್ವರೂಪ ಕೊಡಲು ಪ್ರಯತ್ನಿಸಿದರು. ಮನುಷ್ಯ ಕುಲ ಲಿಂಗ, ವರ್ಣ, ವರ್ಗಗಳೆಂದು ಹರಿದು ಹಂಚಿಹೋಗುವದನ್ನು ಬಲವಾಗಿ ಖಂಡಿಸಿದರು. ಈ ದಿಶೆಯಲ್ಲಿ ವ್ಯಕ್ತಿ ಸ್ವಾತಂತ್ರ್ಯ, ಸ್ತ್ರೀ ಸ್ವಾತಂತ್ರ್ಯ, ಸಮತೆ, ವಿಶ್ವಬಂಧುತ್ವ, ದಯೆ, ಶಾಂತಿಯಂತಹ

ಅಪ್ರತಿಮ ಮೌಲ್ಯಗಳಿನ್ನು ಜೀವಂತವಾಗಿ ಬದುಕಿದರು. ೧೨ನೆಯ ಶತಮಾನದಲ್ಲಿಯೇ ಶಿವಶರಣೆಯರ ಈ ಸಾಹಸ ಜಾಗತಿಕ ಇತಿಹಾಸದಲ್ಲಿಯೇ ಅಪೂರ್ವವಾದ ನಿದರ್ಶನವೆನ್ನಬಹುದು.

ಶರಣೆಯರ ವಚನಗಳು ತತ್ತ್ವಕ್ಕೆ ತತ್ತ್ವ, ಕಾವ್ಯಕ್ಕೆ ಕಾವ್ಯವೆನಿಸಿವೆ. ಅಲ್ಲಿ ತತ್ತ್ವನಿಷ್ಠೆ–ಆಧ್ಯಾತ್ಮಿಕ ಔನ್ನತ್ಯಗಳಿವೆ. ಸಮಾಜದಲ್ಲಿಯ ಅನ್ಯಾಯಗಳನ್ನು ಪ್ರತಿಭಟಿಸಿ ಮುನ್ನುಗ್ಗುವ ಧೈರ್ಯ-ಸ್ಥೈರ್ಯಗಳಿವೆ. ಕಾಯಕನಿಷ್ಠೆಯಿಂದುಂಟಾದ ಸಮೃದ್ಧಿಯ ಬದುಕಿದೆ. ಬಾಳದಾರಿಯಲ್ಲಿ ತಾವು ಗಳಿಸಿದ ಅರಿವಿನ ಬೆಳಕಿನಲ್ಲಿ ಇಹ ಪರ ಸಮನ್ವಯದ ಸಂತೃಪ್ತಿಯಿದೆ. ಈ ಸ್ತ್ರೀ ಹೃದಯಗಳಲ್ಲಿ ಗಂಡೆದೆಯ ಕೆಚ್ಚು ಒಡೆದು ಕಾಣುತ್ತಿದೆ. ಒಬ್ಬೊಬ್ಬ ಶರಣೆಯದು ಒಂದೊಂದು ವಿಶಿಷ್ಟ ಧ್ವನಿಯೆನಿಸಿದರೂ ‘ನಿಜದ ಅನ್ವೇಷಣೆ’ ಯೆಂಬ ಒಂದೇ ಗುರಿಯತ್ತ ಸಾಗುವ ಅವರ ಸಾಧನೆ ಅನುಕರಣೀಯವಾಗಿದೆ. ಒಟ್ಟಿನಲ್ಲಿ ಶರಣೆಯರ ಜೀವನ- ವಚನಗಳಿಂದ ಸರಳ ಬದುಕು-ಉನ್ನತ ವಿಚಾರದ, ಸಂದೇಶ ವ್ಯಕ್ತವಾಗಿದೆ.

—— ——

ಅನುಬಂಧ

ವಚನಕಾರ್ತಿಯರು ಹಾಗೂ ಅವರ ಅಂಕಿತ

೧. ಅಕ್ಕಮಹಾದೇವಿ — ಚನ್ನಮಲ್ಲಿಕಾರ್ಜುನ

೨. ಅಕ್ಕನಾಗಮ್ಮ — ಬಸವಣ್ಣಪ್ರಿಯ ಚನ್ನ-ಸಂಗಯ್ಯ

೩. ಅಕ್ಕಮ್ಮ — ಆಚಾರವೇ ಪ್ರಾಣವಾದ ರಾಮೇಶ್ವರ ಲಿಂಗ

೪. ಅಮುಗೆರಾಯಮ್ಮ — ಅಮುಗೇಶ್ವರ ಲಿಂಗ

೫. ಆಯ್ದಕ್ಕಿ ಲಕ್ಕಮ್ಮ — ಮಾರಯ್ಯ ಪ್ರಿಯ ಅಮಲೇಶ್ವರ ಲಿಂಗ

೬. ಕದಿರ ಕಾಯಕದ ಕಾಳವ್ವೆ — ಗುಮ್ಮೇಶ್ವರ

೭. ಕದಿರ ರೆಮ್ಮವ್ವೆ — ಕದಿರ ರೆಮ್ಮಿಯೊಡೆಯ ಗುಮ್ಮೇಶ್ವರಾ

೮. ಕನ್ನಡಿ ಕಾಯಕದ ರೇಮಮ್ಮ — ಸದ್ಗುರು ಸಂಗ ನಿರಂಗಲಿಂಗ

೯. ಕಾಲಕಣ್ಣಿಯ ಕಾಮಮ್ಮ — ನಿರ್ಭೀತಿ ನಿಜಲಿಂಗ

೧೦. ಕಾಳವ್ವೆ — ಉರಿಲಿಂಗಪೆದ್ದಿಗಳರಸ
(ಉರಿಲಿಂಗ ಪೆದ್ದಿಗಳ ಹೆಂಡತಿ)

೧೧. ಕಾಳವ್ವೆ — ಕರ್ಮಹರ ಕಾಳೇಶ್ವರಾ
(ಬಾಚಿ ಕಾಯಕದ ಬಸವಯ್ಯನ
ಹೆಂಡತಿ)

೧೨. ಕಾಳವ್ವೆ — ಭೀಮೇಶ್ವರಾ
(ಸಿದ್ಧಬುದ್ಧಯ್ಯಗಳ ಹೆಂಡತಿ)

೧೩. ಕೇತಲದೇವಿ — ಕುಂಭೇಶ್ವರಾ

*೧೪. ಕೊಟ್ಟಣದ ಸೋಮಮ್ಮ — ನಿರ್ಲಜ್ಜೇಶ್ವರಾ

*ಇಲ್ಲಿ ಕೊಟ್ಟಣದ ಸೋಮಮ್ಮ ಮತ್ತು ಸೂಳೆ ಸಂಕವ್ವೆ ಈ ಇಬ್ಬರೂ ವಚನಕಾರ್ತಿಯರ ಅಂಕಿತ "ನಿರ್ಲಜ್ಜೇಶ್ವರಾ" ಎಂದು ಒಂದೇ ರೀತಿಯಾಗಿ ಇರುತ್ತದೆ. ಇದುವರೆಗೂ ಇವರ ಒಂದೊಂದೇ ವಚನಗಳು ದೊರೆತಿವೆ. ಉಪಲಬ್ಧವಿರುವ ಎರಡು ವಚನಗಳ ಉತ್ತರಾರ್ಧ ಭಾಗ,

"ಕಾದಕತ್ತಿಯಲ್ಲಿ ಕಿವಿಯ ಕೊಯ್ವರಯ್ಯಾ
ಒಲ್ಲೆಬಲ್ಲೆನಾಗಿ ನಿಮ್ಮಾಣೆ ನಿರ್ಲಜ್ಜೇಶ್ವರಾ"

ಎಂದು ಒಂದೇ ತೆರನಾಗಿದೆ.

ಇಲ್ಲಿ "ನಿರ್ಲಜ್ಜೇಶ್ವರಾ" ಎಂಬ ಅಂಕಿತ ಸೂಳೆ ಸಂಕವ್ವೆಯ ಅಂಕಿತವಾಗಿ ಒಪ್ಪುತ್ತದೆ. ಅವಳ ವಚನದ ಪೂರ್ವಾರ್ಧ ಭಾಗವು "ಒತ್ತೆಯ ಹಿಡಿದು ಮತ್ತೊತ್ತೆಯ ಹಿಡಿಯೆ........." ಎನ್ನುವದು ಅಂಕಿತಕ್ಕೆ ಪೂರಕವಾದ ಅರ್ಥವನ್ನು ಸೂಚಿಸುತ್ತದೆ.

ಕೊಟ್ಟಣದ ಸೋಮಮ್ಮನ "ಹದ ತಪ್ಪಿ ಕುಟ್ಟಲು ನುಚ್ಚಿಲ್ಲದೆ ಅಕ್ಕಿಯಿಲ್ಲ" ಎನ್ನುವ ವಚನದ ಪೂರ್ವಾರ್ಧ ಸರಿಯಾಗಿದ್ದು ವಚನದ ಉತ್ತರಾರ್ಧ ಅವಳ ಆಶಯಕ್ಕೆ ತಕ್ಕುದಾಗಿಲ್ಲ. ಬಹುಶಃ ಲಿಪಿಕಾರನ ದೋಷದಿಂದ ಸೂಳೆ ಸಂಕವ್ವೆಯ ವಚನದ ಉತ್ತರಾರ್ಧ ಕೊಟ್ಟಣದ

ಸೋಮವ್ವೆಯ ಮೇಲಿನ ವಚನಕ್ಕೆ ಜೋಡಿಸಿದಂತೆ ಕಂಡು ಬರುತ್ತದೆ, ಹೀಗಾಗಿ "ನಿರ್ಲಜ್ಜೇಶ್ವರಾ" ಕೊಟ್ಟಣದ ಸೋಮವ್ವೆಯ ಮೂಲ ಅಂಕಿತವಾಗಿರಲಾರದೆನಿಸುತ್ತದೆ. ಬಹುಶಃ ಕೊಟ್ಟಣದ ಸೋಮವ್ವೆಯ ಮೂಲ ಅಂಕಿತ ಕಳೆದಿದ್ದು. ಅದನ್ನು ಇನ್ನೂ ಶೋಧಿಸಬೇಕಾಗಿದೆ. ಈ ವಿಷಯದ ಬಗೆಗೆ ಸುಸಂಬದ್ಧವಾಗಿ ವಿಶ್ಲೇಷಿಸಿ, ಸಲಹೆಯನ್ನಿತ್ತ ಡಾ|| ಎಂ. ಎಂ. ಕಲಬುರ್ಗಿಯವರಿಗೆ ನನ್ನ ಕೃತಜ್ಞತೆಗಳು.

೧೫. ಗಂಗಾಂಬಿಕೆ —ಗಂಗಾಪ್ರಿಯ ಕೂಡಲ ಸಂಗಮದೇವ

೧೬. ಗಂಗಮ್ಮ —ಗಂಗೇಶ್ವರ ಲಿಂಗ

೧೭. ಗಜೇಶಮಸಣಯ್ಯನ ಹೆಂಡತಿ —ಮಸಣಯ್ಯಪ್ರಿಯ ಗಜೇಶ್ವರಾ

೧೮. ಗುಡ್ಡವ್ವೆ —ನಿಂಬೇಶ್ವರಾ

೧೯. ಗೊಗ್ಗವ್ವೆ —ನಾಸ್ತಿನಾಥ

೨೦. ನೀಲಮ್ಮ —ಸಂಗ, ಸಂಗಯ್ಯ, ಸಂಗಯ್ಯ ಬಸವ, ಬಸವಪ್ರಿಯ ಕೂಡಲಸಂಗಮದೇವ.

೨೧. ಬೊಂತಾದೇವಿ —ಬಿಡಾಡಿ,

೨೨. ಮಸಣಮ್ಮ —ನಿಜಗುಣೇಶ್ವರ ಲಿಂಗ

೨೩, ಮುಕ್ತಾಯಕ್ಕ —ಅಜಗಣ್ಣ

೨೪. ಮೋಳಿಗೆಯ ಮಹಾದೇವಿ —ಎನ್ನಯ್ಯ ಪ್ರಿಯ ಇಮ್ಮಡಿ ನಿಃಕಳಂಕಮಲ್ಲಿಕಾರ್ಜುನ

೨೫. ರೇಕಮ್ಮ —ಶ್ರೀ ಗುರುಸಿದ್ಧೇಶ್ವರಾ

೨೬. ರೇಚವ್ವೆ —ನಿಜಶಾಂತೇಶ್ವರ

೨೭. ಲಕ್ಷ್ಮಮ್ಮ —ಅಗಜೇಶ್ವರ

೨೮. ಲಿಂಗಮ್ಮ —ಅಪ್ಪಣ್ಣಪ್ರಿಯ ಚೆನ್ನಬಸವಣ್ಣ

೨೯. ವೀರಮ್ಮ —ಗುರುಶಾಂತೇಶ್ವರ

೩೦. ಸತ್ಯಕ್ಕ —ಶಂಭು ಜಕ್ಕೇಶ್ವರ

೩೧. ಸೂಳೆ ಸಂಕವ್ವೆ —ನಿರ್ಲಜ್ಜೇಶ್ವರ

ಶರಣ ದಂಪತಿಗಳ ಹೆಸರು

೧. ಜೇಡರ ದುಗ್ಗಳೆ — ದಾಸಿಮಯ್ಯ

೨. ಆಯ್ದಕ್ಕಿ ಲಕ್ಕಮ್ಮ — ಮಾರಯ್ಯ

೩. ಮೋಳಿಗೆಯ ಮಹಾದೇವಿ — ಮಾರಯ್ಯ

೪. ರಾಯಸದ ರಾಯಮ್ಮ — ಮಂಚಣ್ಣ

೫. ಕೊಂಡೆಯ ಲಕ್ಷ್ಮಮ್ಮ — ಮಂಚಣ್ಣ

೬. ಹಡಪದ ಲಿಂಗಮ್ಮ — ಅಪ್ಪಣ್ಣ

೭. ಎಡೆಮಠದ ಮಸಣಮ್ಮ — ನಾಗಿದೇವ

೮. ಬಾಚಿಕಾಯಕದ ಕಾಳವ್ವ — ಬಸಪ್ಪ

೯. ರೇಕಮ್ಮ — ರೇವಣ್ಣಸಿದ್ಧಯ್ಯ

೧೦. ಕಾಳವ್ವೆ — ಉರಿಲಿಂಗಪೆದ್ದಿ

೧೧. ರೇಚವ್ವೆ — ಕಾಟಕೂಟಯ್ಯ

೧೨. ಕೇತಲದೇವಿ — ಗುಂಡಯ್ಯ

೧೩. ವೀರಮ್ಮ — ದಸರಯ್ಯ

೧೪. ಕಾಳವ್ವೆ — ಸಿದ್ಧಬುದ್ಧಯ್ಯ

೧೫. ಗುಡ್ಡವ್ವೆ — ಬತ್ತಲೇಶ್ವರ

೧೬. ಗಂಗಾಂಬಿಕೆ, ನೀಲಾಂಬಿಕೆ — ಬಸವಣ್ಣ

——

ಉಪನ್ಯಾಸ ಗ್ರಂಥಮಾಲೆಯ

ಕೆಲವು ಪ್ರಕಟನೆಗಳು

೧. ನಾಗರಹಳ್ಳಿ ಶ್ರೀಶರಣಬಸವೇಶ್ವರರು – ಸಿ. ವ್ಹಿ. ಕೆರಿಮನಿ

೨. ಅಕ್ಕನಾಗಮ್ಮ – ಎಸ್. ಎಸ್. ಭೂಸರಡ್ಡಿ

೩. ಕರ್ತೃ ಶ್ರೀಜಗದ್ಗುರು ಫಕೀರೇಶ್ವರರು – ಶ್ರೀ ಫಕೀರ ಮಲ್ಲಿಕಾರ್ಜುನ ದೇವರು

೪. ನೀಲಾಂಬಿಕೆ – ಎಸ್. ಎಸ್. ಭೂಸರಡ್ಡಿ

೫. ಬಾಲಲೀಲಾ ಮಹಾಂತ ಶಿವಯೋಗಿ – ಎಸ್. ಎಸ್. ಭೂಸರಡ್ಡಿ

೬. ಶಿವಶರಣರ ಕ್ರಾಂತಿ – ಸಿದ್ದಣ್ಣ ಲಂಗೋಟಿ

೭. ಢಕ್ಕೆಯ ಬೊಮ್ಮಣ್ಣ – ಎಚ್. ಎಸ್. ಮುಕ್ತಾಯಕ್ಕ

೮. ವಚನಕಾರ ಮಡಿವಾಳ ಮಾಚಿದೇವ – ಎಸ್. ಕೆ. ಕೊಪ್ಪಾ

೯. ಅನುಭವ ಮಂಟಪದಲ್ಲಿ ಅಕ್ಕಮಹಾದೇವಿ – ಸಂಗಮೇಶ ಬಿರಾದಾರ

೧೦. ಶರಣರ ಆರ್ಥಿಕ ಚಿಂತನೆ – ಬಿ. ಎ. ಪಾಟೀಲ

ಪ್ರಸಾರಾಂಗ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ